ಸಂಪುಟ 01 | ಸಂಚಿಕೆ 72 | ಗುರುವಾರ 22 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

01) ಜೀವನ ದಿನಾಚರಣೆ

ಜನವರಿ 22 ರಂದು ಜೀವನ ದಿನಾಚರಣೆಯು ನಮ್ಮ ಜೀವನಕ್ಕೆ ಸಂತೋಷವನ್ನು ತರುವ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಗೌರವಿಸುತ್ತದೆ. ಈ ದಿನವು ಪ್ರತಿಯೊಂದು ಮಗು ಮತ್ತು ಪ್ರತಿಯೊಂದು ಜೀವನವನ್ನು ಅತ್ಯುನ್ನತ ಗೌರವ ಮತ್ತು ಘನತೆಯೊಂದಿಗೆ ಅಮೂಲ್ಯ ಉಡುಗೊರೆಯಾಗಿ ಪರಿಗಣಿಸಬೇಕು ಎಂಬುದನ್ನು ನೆನಪಿಸುತ್ತದೆ.

## ಸುಭಾಷಿತ

ಪರರನ್ನು ಹೀನವಾಗಿ ಪರಿಗಣಿಸಬೇಡಿ. ಅದು ನಿಮ್ಮ ಮನಸ್ಸಿನ ಯೋಗ್ಯತೆಯನ್ನು ಕುಗ್ಗಿಸುತ್ತದೆ

ಇಂಗರ್ ಸಾಲ

# 233 ವರ್ಷದ ಪುರಾತನ ವಾಲ್ಮೀಕಿ ರಾಮಾಯಣದ ಹಸ್ತಪ್ರತಿ ಅಯೋಧ್ಯೆ ವಸ್ತುಸಂಗ್ರಹಾಲಯಕ್ಕೆ ಹಸ್ತಾಂತರ

ನವದೆಹಲಿ: ವಾಲ್ಮೀಕಿಯ ರಾಮಾಯಣದ 233 ವರ್ಷದಗಳಷ್ಟು ಹಳೆಯದಾದ ಅಪರೂಪದ ಸಂಸ್ಕೃತ ಹಸ್ತಪ್ರತಿಯನ್ನು ಅಯೋಧ್ಯೆಯ ರಾಮ ಕಥಾ ವಸ್ತುಸಂಗ್ರಹಾಲಯಕ್ಕೆ ಉಡುಗೊರೆಯಾಗಿ ನೀಡಲಾಗಿದೆ ಎಂದು ಸಂಸ್ಕೃತಿ ಸಚಿವಾಲಯ ತಿಳಿಸಿದೆ. ಒಂದು ಮಹತ್ವದ ಸಾಂಸ್ಕೃತಿಕ ಹಸ್ತಾಂತರದಲ್ಲಿ, ಕೇಂದ್ರ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀನಿವಾಸ ವರಖೇಡಿ ಅವರು ವಾಲ್ಮೀಕಿರಾಮಾಯಣದ ಹಸ್ತಪ್ರತಿಯನ್ನು (ತತ್ತ್ವದೀಪಿಕಾಟಿಕದೊಂದಿಗೆ) ಪ್ರಧಾನ ಮಂತ್ರಿಗಳ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರಿಗೆ ಪ್ರದಾನ ಮಾಡಿದರು ಎಂದು ಅದು ಹೇಳಿದೆ.

ಮಹೇಶ್ವರ ತರಥರು ಶಾಸ್ತ್ರೀಯ ವ್ಯಾಖ್ಯಾನದೊಂದಿಗೆ (ಟಿಕಾ) ಆದಿ ಕವಿ ವಾಲ್ಮೀಕಿ ಬರೆದ ಹಸ್ತಪ್ರತಿಯನ್ನು ಸಂಸ್ಕೃತದಲ್ಲಿ (ದೇವನಾಗರಿ ಲಿಪಿಯಲ್ಲಿ) ಬರೆಯಲಾಗಿದೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.ಇದು ವಿಕ್ರಮ ಸಂವತ್ 1849 (1792) ರ ಐತಿಹಾಸಿಕವಾಗಿ ಮಹತ್ವದ ಕೃತಿಯಾಗಿದ್ದು, ರಾಮಾಯಣದ ಅಪರೂಪದ ಸಂರಕ್ಷಿತ ಪಠ್ಯ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ ಎಂದು ಅದು ಹೇಳಿದೆ.



ಈ ಸಂಗ್ರಹವು ಮಹಾಕಾವ್ಯದ ಐದು ಪ್ರಮುಖ ಕಾಂಡಗಳನ್ನು ಒಳಗೊಂಡಿದೆ ಬಾಲಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡ ಇತಿಹಾಸದ ನಿರೂಪಣೆ ಮತ್ತು ತಾತ್ವಿಕ ಆಳವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿಕೆ ತಿಳಿಸಿದೆ. ಈ ಹಿಂದೆ ನವದೆಹಲಿಯ ರಾಷ್ಟ್ರಪತಿ ಭವನಕ್ಕೆ ಎರವಲು ಪಡೆಯಲಾಗಿದ್ದ ಹಸ್ತಪ್ರತಿಯನ್ನು ಈಗ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿರುವ ಅಂತರರಾಷ್ಟ್ರೀಯ ರಾಮ ಕಥಾ ಸಂಗ್ರಹಾಲಯಕ್ಕೆ (ಅಂತರರಾಷ್ಟ್ರೀಯ ರಾಮ ಕಥಾ ವಸ್ತುಸಂಗ್ರಹಾಲಯ) ಶಾಶ್ವತವಾಗಿ ಉಡು-ಗೊರೆಯಾಗಿ ನೀಡಲಾಗಿದೆ ಎಂದು ಅದು ಹೇಳಿದೆ.

ಈ ಮಹತ್ವದ ಕರ?ಯವು ರಾಮಾಯಣ ಪರಂಪರೆಯ ಜಾಗತಿಕ ಕೇಂದ್ರವಾಗಿ ವಸ್ತುಸಂಗ್ರಹಾಲಯದ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ, ವ್ಯಾಪಕ ಸಾರ್ವಜನಿಕ ಪ್ರವೇಶ ಮತ್ತು ಸಂರಕ್ಷಣೆಯನ್ನು ಖಚಿತಪಡಿಸುತ್ತದೆ ಎಂದು ಅಧಿಕಾರಿಗಳು ಹೇಳಿದರು. ಈ ಉಡುಗೊರೆ ವಾಲ್ಮೀಕಿ ರಾಮಾಯಣದ ಆಳವಾದ ಬುದ್ಧಿವಂತಿಕೆಯನ್ನು ಅಮರಗೊಳಿಸುತ್ತದೆ, ಇದು ಪವಿತ್ರ ನಗರವಾದ ಅಯೋಧ್ಯೆಯಲ್ಲಿ ಪ್ರಪಂಚದಾದ್ಯಂತದ ವಿದ್ವಾಂಸರು, ಭಕ್ತರು ಮತ್ತು ಸಂಶೋಧಕರಿಗೆ ಪ್ರವೇಶಿಸಬಹುದಾಗಿದೆ ಎಂದು ವರಖೇಡಿ ಹೇಳಿದರು.ವಾಲ್ಮೀಕಿ ರಾಮಾಯಣದ ಈ ಅಪರೂಪದ ಹಸ್ತಪ್ರತಿಯನ್ನು ಅಯೋಧ್ಯೆಯಲ್ಲಿ ರಾಮ ಕಥಾ ಸಂಗ್ರಹಾಲಯಕ್ಕೆ ದಾನ ಮಾಡುವುದು ರಾಮನ ಭಕ್ತರಿಗೆ ಮತ್ತು ಅಯೋಧ್ಯೆಯಲ್ಲಿನ ದೇವಾಲಯ ಸಂಕಲ್ಪಕ್ಕೆ ಒಂದು ಹೆಗ್ಗುರುತು ಕ್ಷಣವಾಗಿದೆ ಎಂದು ಮಿಶ್ರಾ ಹೇಳಿದರು.

## ಮಾನವೀಯತೆ ಮೆರೆದ ಮುಖಂಡ ಯಡಿಯಾಪುರ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ತಾಲೂಕಿನ ಬ.ಸಾಲವಾಡಗಿ ಗ್ರಾಮದವರಾದ ಬಿಜೆಪಿ ಮುಖಂಡ ಬಸನಗೌಡ ಪಾಟೀಲ ಯಡಿಯಾಪೂರ ಅವರು ರಸ್ತೆ ಅಪಘಾತದಲ್ಲಿ ನಿಧನರಾದ ಸದ್ದಾಂ ಮಹೆಬೂಬ ಹಳ್ಳಿ (ದೇವರ ಹಿಪ್ಪರಗಿ) ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿ ಧನ ಸಹಾಯ ಮಾಡಿದರು.



ಈ ಸಂದರ್ಭದಲ್ಲಿ ಅವರು ಮಾತನಾಡಿ ಕುಟುಂಬದ ಜವಾಬ್ದಾರಿ ಹೊತ್ತ ಸದ್ದಾಂ ಅವರ ಅಕಾಲಿಕ ಮರಣದಿಂದ ಕುಟುಂಬಕ್ಕೆ ತುಂಬಾ ತೊಂದರೆ ಯಾಗಿದೆ ಭಗವಂತ ಅವರಿಗೆ ಈ ದುಃಖ ಸಹಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ ನನ್ನಿಂದ ಕೈಲಾದಷ್ಟು ಸಹಾಯ ಮಾಡಿದ್ದೇನೆ ಎಂದರು. ಈ ಸಮಯದಲ್ಲಿ ಸದ್ದಾಂ ಹಳ್ಳಿ ಕುಟುಂಬದ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಳ್ಳಾರಿಯಲ್ಲಿ ವಾಲ್ಮೀಕಿ ಮೂರ್ತಿ ಅನಾವರಣ ಮಾಡಲು ಒತ್ತಾಯ



ನೈಜ್ಯ ದೆಸೆ ನ್ಯೂಸ್

ಕವಿತಾಳ: ಬಳ್ಳಾರಿಯಲ್ಲಿ ಮಹರ್ಷಿ ವಾಲ್ಮೀಕಿ ಮೂರ್ತಿ ಅನಾವರಣ ಮಾಡಲು ವಾಲ್ಮೀಕಿ ಸಮಾಜ ಮುಖಂಡ ಭೀಮಣ್ಣ ನಾಯಕ್ ಕಾಚಾಪೂರ ಒತ್ತಾಯಿಸಿದ್ದಾರೆ. ಅವರು ಇಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಮಹರ್ಷಿ ವಾಲ್ಮೀಕಿ ಪುತ್ತಳಿ ಅನಾವರಣ ಕುರಿತಾಗಿ ನಡೆದ ಘಟನೆಯಲ್ಲಿ ರಾಜಕೀಯ ಪಕ್ಷಗಳ ಜಿದ್ದಾಜಿದ್ದಿ ವಾಲ್ಮೀಕಿಗೆ ಮಾಡುವ ಅನ್ಯಾಯ ಇದು ಶ್ರೀ ರಾಮುಲು ಅವರಿಗೆ ಅವಮಾನ ಆಗಿಲ್ಲ ಬದಲಿಗೆ ರಾಮಾಯಣ ಗ್ರಂಥ ಬರೆದ ಶ್ರೀ ಮಹರ್ಷಿ ವಾಲ್ಮೀಕಿ ಅವರಿಗೆ ಆದಂತ ಅವಮಾನ ಆದ್ದ-ರಿಂದ ಶ್ರೀ ಮಹರ್ಷಿ ಮೂರ್ತಿ ಅನಾವರಣದಲ್ಲಿ ರಾಜಕೀಯ ಬೇಡ ಪಕ್ಷಬೇದ ಮರೆತು ನಾಯಕ ಸಮಾಜದ ಜನರು ಮತ್ತು ವಿವಿಧ ಸಂಘಟನೆಗಳ ಮುಖಂಡರು ಸೇರಿ ವಾಲ್ಮೀಕಿ ಮೂರ್ತಿ ಅನಾವರಣ ಮಾಡೋಣ' ಎಂದು ಹೇಳಿದರು.

'ನನ್ನ ಎಲ್ಲ ಕುಲಬಾಂಧವರು ರಾಜಕೀಯ ಪಕ್ಷವನ್ನು ಬಿಟ್ಟು ಹೊರಬನ್ನಿ ಸಮಾಜದ ಋಣ ತೀರಿಸಲು ಹೋರಾಡೋಣ, ಗುಲಾಮಗಿರಿ ಬಿಡಿ ಸಮಾಜದ ವತಿಯಿಂದ ಮೂರ್ತಿಯನ್ನು ಅನಾವರಣ ಗೊಳಿಸೋಣ ಎಂದು ಮನವಿ ಮಾಡಿದರು ಮತ್ತು ಮುಂದಿನ ತಿಂಗಳು 8.9.2026 ರಂದು ರಾಜನಹಳ್ಳಿಯಲ್ಲಿ ವಾಲ್ಮೀಕಿ ಜಾತ್ರೆ ಇರುವ ಕಾರಣ ಜಾತ್ರೆಗೆ ಮುಂಚಿತವಾಗಿ ಬಳ್ಳಾರಿಯಲ್ಲಿ ಮಹಿರ್ಷಿಗಳ ಮೂರ್ತಿ ಅನಾವರಣ ಮಾಡಲು ವಾಲ್ಮೀಕಿ ಸಮಜದ ಮುಖಂಡರು ಕ್ರಮ ಕೈಗೊಳ್ಳಬೇಕು ಇಲ್ಲವಾದರೇ ಇದರ ಪರಿಣಾಮ ಎದು-ರಿಸಬೇಕಾಗುತ್ತದೆ' ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಯಂಕೋಬ ನಾಯಕ ಮಲ್ಲದಗುಡ್ಡ,ಬಸವರಾಜ ನಾಯಕಸೈದಾಪುರ ಇನ್ನಿತರರು ಇದ್ದರು.

## ಕುಂಟೋಜಿ ಪಂಚಾಯತಿಯಲ್ಲಿ ಅಂಬಿಗರ ಚೌಡಯ್ಯ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಕುಂಟೋಜಿ ಗ್ರಾಮ ಪಂಚಾಯತ್ ವತಿಯಿಂದ ಭಕ್ತ ಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.**

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮೋಹನ ಹುಲ್ಲೂರು ಮಾತನಾಡಿ, ಅಂಬಿಗರ ಚೌಡಯ್ಯನವರು ಬಸವಣ್ಣನವರ ಸಮಕಾಲೀನರಾದ ಮಹಾನ್ ವಚನಕಾರರಾಗಿದ್ದು, ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಜಾತಿ, ವರ್ಗ ಭೇದ, ಅಸಮಾನತೆ ಹಾಗೂ ಅಂ-ಧಶ್ರದ್ಧೆಗಳ ವಿರುದ್ಧ ಧೈರ್ಯವಾಗಿ ಹೋರಾಟ ನಡೆಸಿದ ಶರಣರು ಎಂದರು. ಶ್ರಮದ ಗೌರವ, ಸಮಾನತೆ



ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಅವರ ವಚನಗಳು ಇಂದಿನ ಸಮಾಜಕ್ಕೂ ಸಮಾನವಾಗಿ ಪ್ರಾಸಂಗಿಕವಾಗಿವೆ ಎಂದು ಹೇಳಿದರು.

ಗ್ರಾಮ ಪಂಚಾಯತ್ ಕಾರ್ಯದರ್ಶಿ ಗಿರೀಶ್ ಬಿರಾದರ ಮಾತನಾಡಿ, ಅಂಬಿಗರ ಚೌಡಯ್ಯನವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾನತೆ, ಶಾಂತಿ ಮತ್ತು ಸಾಮಾಜಿಕ ನ್ಯಾಯ ಆಧಾ-ರಿತ ಉತ್ತಮ ಸಮಾಜ ನಿರ್ಮಾಣ ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಪಂಚಾಯತ್ ಸದಸ್ಯರು, ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತ-ರಿದ್ದು, ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಲಾಯಿತು.

## ಹೆಣ್ಣು ಮಗು ಓದಿಸಿ,ರಕ್ಷಿಸಿ ಕುಟುಂಬಕ್ಕೆ ಆಧಾರ: ಪಂಪಾಪತಿ ಹೂಗಾರ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಕೇಂದ್ರ ಸರಕಾರದ ಭೇಟಿ ಬಚಾವೋ ,ಭೇಟಿ ಪಡಾವೋ ಯೋಜನೆಗೆ ಇಡೀ ಸಮಾಜವನ್ನೇ ಮುನ್ನಡೆಸುವ ಶಕ್ತಿಯಿದೆ ಎಂದು ಮಸ್ಕಿ ತಾಲೂಕು ನೌಕರರ ಸಂಘದ ಅಧ್ಯಕ್ಷ ಪಂಪಾಪತಿ ಹೂಗಾರ ಅಭಿಪ್ರಾಯ ವ್ಯಕ್ತಪಡಿಸಿದರು.**

ಮಸ್ಕಿ ತಾಲೂಕು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬುಧುವಾರ ನಡೆದ ಹೆಣ್ಣು ಮಕ್ಕಳನ್ನು ರಕ್ಷಿಸಿ, ಹೆಣ್ಣು ಮಗುವನ್ನು ಓದಿಸಿ ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಶಿವಲೀಲಾ ಹಿರೇಮಠ. ಮಾತನಾಡಿ, ಗಂಡು, ಹೆಣ್ಣಿನ



ಅನುಪಾತ ಅವಲೋಕಿಸಿಯಾದರೂ ನಾವು ಎಚ್ಚೆತ್ತುಕೊಳ್ಳಬೇಕಿದೆ. ಹೆಣ್ಣಿಗೆ ಹೆಣ್ಣೆ ಶತ್ರು ಆಗಬಾರದು. ತನಗೆ ಗಂಡು ಮಗುವೇ ಬೇಕು ಎನ್ನುವ ಆಸೆ ಬಿಡಬೇಕು.

ಮನೆಯಲ್ಲಿ ಹೆಣ್ಣು ಹಾಗೂ ಗಂಡು ಮಕ್ಕಳನ್ನು ಸಮಾನವಾಗಿ ನೋಡುವ ಮನೋಭಾವ ಎಲ್ಲರಲ್ಲೂ ಮೂಡಬೇಕು. ಇದಕ್ಕಾಗಿ ಹೆಣ್ಣು ಮಗುವಿಗೆ ಉನ್ನತ ಶಿಕ್ಷ ಣ ನೀಡುವ ಅವಶ್ಯಕತೆ ಇದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಸುರೇಶ್ ಹರಸೂರು, ಮುಖ್ಯಗುರು ಮೋಹನ್ ಬಾವಿಮನಿ, ಜಿ ವೆಂಕಟೇಶ್,ಅಮರೇಶ ಪತ್ತಾರ,ಡಾ. ಅಮರೇಶ, ಶಶಿರೇಖಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ವಿದ್ಯಾರ್ಥಿನಿಯರು ಭಾಗಿಯಾಗಿದ್ದರು.

# ಅಂಬಿಗರ ಚೌಡಯ್ಯನವರ ಆದರ್ಶಗಳನ್ನು ಪಾಲಿಸಿ: ನಲ್ಲಾ ವೆಂಕಟೇಶರಾವ್

ನೈಜ್ಯ ದೆಸೆ ನ್ಯೂಸ್

**ಅಂಬಿಗರ ಚೌಡಯ್ಯ 12ನೇ ಶತಮಾನದ ಶರಣ ಸಂತರು ಹಾಗೂ ವಚನಕಾರರು. ಇವರು "ಕಾಯಕವೇ ಕೈಲಾಸ" ಸಮಾನತೆ, ದಾಸೋಹ, ಸತ್ಯ, ನೀತಿ, ಮತ್ತು ಮಾನವೀಯತೆಯೇ ಅವರ ಜೀವನದ ಮೂಲ ಆದರ್ಶಗಳು. ಅವುಗಳನ್ನು ಆಚರಿಸುವುದರ ಮೂಲಕ ಶ್ರಮದ ಗೌರವ, ಸಾಮಾಜಿಕ ಸಮಾನತೆ ಮತ್ತು ನೈತಿಕ ಬದುಕಿನ ಮಹತ್ವವನ್ನು ನೆನಪಿಸಿಕೊಳ್ಳಲಾಗುತ್ತದೆ. ಎಂದು ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ನಲ್ಲಾ ವೆಂಕಟೇಶ್ವರರಾವ್ ಹೇಳಿದರು.**

ತುರುವಿಹಾಳ ಪಟ್ಟಣದ ಸರಕಾರಿ ಪ್ರಥ-ಮ ದರ್ಜೆ ಕಾಲೇಜಿನಲ್ಲಿ ಅಂಬಿಗರ ಚೌಡಯ್ಯ ಜಯಂತಿಯನ್ನು ಆಚರಿಸಿದ ಮಾತನಾಡಿದ ಅವರು, ಕಾಯಕವೇ ಕೈಲಾಸ, ಪ್ರಾಮಾಣಿಕ ಶ್ರಮವೇ ಪೂಜೆ ಎಂದು ನಂಬಿದ್ದರು. ದುಡಿಯದೇ ಬದುಕುವುದು ತಪ್ಪು ಎಂಬ ಸಂದೇಶ ನೀಡಿದರು. ಸಮಾನತೆ ಜಾತಿ, ವರ್ಗ, ಲಿಂಗ ಭೇದವಿಲ್ಲದೆ



ಎಲ್ಲರೂ ಸಮಾನರು ಎಂದು ಸಾರಿ ಭಕ್ತಿ ಸರಳತೆ ಬಾಹ್ಯ ಆಚಾರಗಳಿಗಿಂತ ಒಳಗಿನ ಶುದ್ಧ ಭಕ್ತಿ ಮುಖ್ಯ ಎಂದು ಸತ್ಯ ಮತ್ತು ನೀತಿ ಸತ್ಯವಚನ, ನೈತಿಕ ಜೀವನಕ್ಕೆ ಒತ್ತು ನೀಡಿದರು. ದುಡಿಯುವುದರಿಂದ ಬಂದ ಆದಾಯವನ್ನು ಇತರರೊಂದಿಗೆ ಹಂಚಿಕೊಳ್ಳಬೇಕು ಎಂಬ ಮನೋಭಾವ, ಅಹಂಕಾರದ ವಿರೋಧ, ಗರ್ವ, ಐಶ್ವರ್ಯ ಪ್ರದರ್ಶನ, ಸುಳ್ಳು ಭಕ್ತಿಯನ್ನು ತೀವ್ರವಾಗಿ ಟೀಕಿಸಿದರು. ಮಾನವೀಯತೆ, ಬಡವರು, ಶೋಷಿತರ ಮೇಲೆ ಕರುಣೆ ಮತ್ತು ಸಹಾನುಭೂತಿಯನ್ನು ತೋರಬೇಕು ಅಂದಾಗ ಮಾತ್ರ ಈ ಜಯಂತಿಗಳಿಗೆ ಅರ್ಥ ಬರುತ್ತದೆ ಎಂದು ಹೇಳಿದರು.

ಕುಮಾರ ಸಂತೋಷ ಮಾತನಾಡಿ, ಅಂಬಿಗರ ಚೌಡಯ್ಯ ನವರು ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಅಂದಿನ ಶಿವಪುರ ಇಂದಿನ ಚೌಡದಾನಪುರದಲ್ಲಿ ಜನಿಸಿದರು, ತಂದೆ ವಿರೂಪಾಕ್ಷ, ತಾಯಿ ಪಂಪಾದೇವಿಯ ಪುಣ್ಯ ಗರ್ಭದಲ್ಲಿ 1120ರ ಜನವರಿ 21ರಂದು ಜನಿಸಿ ತ್ರಿಪುರಗಳಲ್ಲಿ ಒಂದಾದ ನರಸೀಪುರದಲ್ಲಿ ಇರುವ ಉದ್ದಾಲಕ ಮುನಿಗಳ ಆಶ್ರಮದಲ್ಲಿ ಸಕಲ ವಿದ್ಯೆಗಳನ್ನು ಪಡೆದು, ಮುಂದೆ ಬಸವಣ್ಣನವರು ಸ್ಥಾಪಿಸಿದ ವಿಶ್ವದ ಪ್ರಪ್ರಥಮ ಪಾರ್ಲಿಮೆಂಟ್ ಆದ ಅನುಭವ ಮಂಟಪದಲ್ಲಿ ಭಾಗವಹಿಸಿ ಶೂನ್ಯ ಪೀಠಾಧ್ಯಕ್ಷರಾದ ಅಲ್ಲಮಪ್ರಭುಗಳು, ಅಣ್ಣಬಸವಣ್ಣ, ಅಕ್ಕಮಹಾದೇವಿ, ಶಿವಯೋಗಿ ಸಿದ್ಧರಾಮೇಶ್ವರರು, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ ಮುಂತಾದ ಶರಣರ ಅನುಭಾವ ಚಿಂತನೆ ಸಭೆಯಲ್ಲಿ ಭಾಗವಹಿಸಿದ್ದರು ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಆದಿಕವಿ ಶ್ರೀ ವಾಲ್ಮೀಕಿ ವಿಶ್ವವಿದ್ಯಾನಿಲಯದ ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರು ಮತ್ತು ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಚಂದ್ರಶೇಖರಗೌಡ ಪೊಲೀಸ್ ಪಾಟೀಲ್, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಜೈರುದ್ದೀನ್ ಸಾಬ್, ಸಿದ್ದರಾಮಯ್ಯ, ಯಂಕಪ್ಪ, ದುರುಗಪ್ಪ, ಬಾಲಾಜಿ, ವೀರಭದ್ರಗೌಡ, ರಾಜಪ್ಪ, ಸಾಯಿಕುಮಾರ, ಶಂಕರಲಿಂಗ, ಲಕ್ಷ್ಮಿ ಗಂಡ ಸೋಮನಾಥ, ಪ್ರಾಂಶುಪಾಲರಾದ ಡಾ.ಕೆ.ಖಾದರ್ ಭಾಷಾ, ಸಹ ಪ್ರಾಧ್ಯಾಪಕರಾದ ಡಾ.ವೆಂಕಟರಮಣ, ಸಹಾಯಕ ಪ್ರಾಧ್ಯಾಪಕರಾದ ಡಾ.ದೇವಿದಾಸ, ಮೌಲಾಸಾಬ್, ಹನುಮೇಶ, ರಾಜೇಶ, ಗಂಗಾಬಾಯಿ, ಉಪನ್ಯಾಸಕರಾದ ಮಹಾದೇವ, ಭೀಮಾಶಂಕರ, ತಿಮ್ಮಯ್ಯ, ಬಸವರಾಜ, ನರಸಣ್ಣ, ನಾಗರಾಜ, ಶಿವಶರಣಪ್ಪ, ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಅಧ್ಯಾಯವನ್ನು ಬೋಧಿಸಿದ ಶಿಕ್ಷಕ
ಜ್ಞಾನವ ತುಂಬಿದ ತಂದೆ ಅಮೂಲ್ಯವಾದ ಪ್ರೀತಿ
ತೋರಿಸಿದ ತಾಯಿ ,ಶಿಕ್ಷಕಿ ಎಂದು ನಮಗೆ ಕೇಡನ್ನು
ಬಯಸುವುದಿಲ್ಲ....

ಅನುಭವದಿಂದ ಬಂದ ತಂದೆ
ದಾರಿ ತೋರಿಸಿದರೆ......
ಕಷ್ಟದಕಗಳನ್ನು ಸಹಿಸಿಕೊಂಡು ಬಂದ ತಾಯಿ,
ದಾರಿ ಹೇಗೆ ನಡೆಯಬೇಕು ಎಂದು ಹೇಳುವಳು......

ಶಿಕ್ಷಕನೋರ್ವ ದಾರಿಯಲ್ಲಿ ಮುಳ್ಳು ತೆಗೆಯುವುದು ಹೇಗೆ
ಎಂದು ತೋರಿಸುವರು, ಅಂದ ಹಾಗೆ ಅವರ ಪ್ರೀತಿಯು
ನಮಗೆ ಸಾಧನೆ ಸಾಧಕನನ್ನಾಗಿ ಮಾಡಿಸುವುದು...

ನೋವು ತಿಂದವನು ಬೇರೆಯವರಿಗೆ ನೋವು ಕೊಡಲಾರ...
ಹೊಟ್ಟೆ ತುಂಬಿದವ ... ನೋವನ್ನು ಪರೀಕ್ಷಿಸಲು ನೋವು
ಕೊಡುವನು..

ತಂದೆ ತಾಯಿ ಶಿಕ್ಷಕ ಪ್ರೀತಿ ಎಂದು ನಮ್ಮಿಂದ ದೂರ
ಹೋಗಲಾರವು...
ಜೀವನ, ಪ್ರಯತ್ನ, ಸಾಧನೆಗೆ ನಮ್ಮ ಜೊತೆ ಇರುವವು...

ಯಾಸೀನಾ ಇರ್ಫಾನ್ ಸಿಂದನೂರ್

# ಮುದಗಲ್ ಸ.ಪ್ರ.ದ. ಕಾಲೇಜಿನಲ್ಲಿ 'ದಾಸೋಹ ದಿನ' ಹಾಗೂ ಅಂಬಿಗರ ಚೌಡಯ್ಯ ಜಯಂತಿ ಅರ್ಥಪೂರ್ಣ ಆಚರಣೆ



❑ ನೈಜ್ಯ ದೆಸೆ ನ್ಯೂಸ್

**ಮುದಗಲ್: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (GFGC) ಯಲ್ಲಿ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮೀಜಿಗಳ ತ್ರಿವಿಧ ದಾಸೋಹ ಸೇವೆಯಾದ ಅನ್ನದಾಸೋಹ, ಅಕ್ಷರದಾಸೋಹ ಮತ್ತು ಆತ್ಮದಾಸೋಹದ ಮಹತ್ವವನ್ನು ಸ್ಮ-ರಿಸುವ ನಿಟ್ಟಿನಲ್ಲಿ ಜನವರಿ 21ರಂದು ರಾಜ್ಯಾದ್ಯಂತ ಆಚರಿಸಲಾದ 'ದಾಸೋಹ ದಿನ'? ಅರ್ಥಪೂರ್ಣವಾಗಿ ಆಚರಿಸಲಾಯಿತು.**

ಇದೇ ವೇಳೆ ಶರಣ ಚಳವಳಿಯ ಮಹಾನ್ ವಚನಕಾರ ಅಂಬಿಗರ ಚೌಡಯ್ಯ ಅವರ ಜಯಂತಿಯನ್ನೂ ಗೌರವಪೂರ್ವಕವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮೀಜಿಗಳ ಹಾಗೂ ಅಂಬಿಗರ ಚೌಡಯ್ಯ ಅವರ ಭಾವಚಿತ್ರಗಳಿಗೆ ಹಾರಾರ್ಪಣೆ ಮಾಡಿ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನಗಳನ್ನು ಅರ್ಪಿಸಲಾಯಿತು. ನಂತರ ನಡೆದ ಸಭೆಯಲ್ಲಿ ದಾಸೋಹ ಪರಂಪರೆಯ ಸಾಮಾಜಿಕ ಮಹತ್ವ ಹಾಗೂ ವಚನಕಾರರ ಸಮಾನತೆಯ ಸಂದೇಶಗಳ ಕುರಿತು ಚರ್ಚಿಸಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಸಿದ್ದರಾಮ ಪಾಟೀಲ್ ಅವರು, ಸಿದ್ಧಗಂಗಾ ಶ್ರೀಗಳು ತಮ್ಮ ಜೀವನವನ್ನೇ ದಾಸೋಹ ಸೇವೆಗೆ ಅರ್ಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಸಮಾಜಕ್ಕೆ ಮಾದರಿಯಾದರು ಎಂದು ಹೇಳಿದರು. ಅನ್ನದಾಸೋಹ ಮತ್ತು ಶಿಕ್ಷಣದ ಮೂಲಕ ಬಡವರ ಬದುಕಿಗೆ ಬೆಳಕು ತಂದ ಶ್ರೀಗಳ ಸೇವೆ ಇಂದು ಯುವ ಪೀಳಿಗೆಗೆ ಪ್ರೇರಣೆಯಾಗಬೇಕು ಎಂದು ತಿಳಿಸಿದರು. ಅಂಬಿಗರ ಚೌಡಯ್ಯ ಅವರು ಶ್ರಮಜೀವಿಗಳ ಧ್ವನಿಯಾಗಿದ್ದು, ಸಾಮಾಜಿಕ ಅಸಮಾನತೆ ವಿರುದ್ಧ ವಚನಗಳ ಮೂಲಕ ಹೋರಾಟ ನಡೆಸಿದ ಮಹಾನ್ ಚಿಂತಕ ಎಂದು ಅವರು ಸ್ಮರಿಸಿದರು.

ಇಂತಹ ಮಹನೀಯರ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ರವಿಚಂದ್ರ, ಎಂ.ಡಿ. ಚಿತ್ತರಗಿ, ನಾಗರಾಜ, ನಾಗವರ್ಧನರೆಡ್ಡಿ, ಶೋಭಾ, ಏಜಾಜ್, ಭವ್ಯ ಸೇರಿದಂತೆ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತ-ರಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದರು. ಕಾರ್ಯಕ್ರಮವು ದಾಸೋಹ ಮತ್ತು ಸಮಾನತೆಯ ಸಂದೇಶವನ್ನು ವಿದ್ಯಾರ್ಥಿಗಳಲ್ಲಿ ಬಿತ್ತುವಲ್ಲಿ ಯಶಸ್ವಿಯಾಯಿತು.

# ಏಪ್ರಿಲ್ 20 ರಂದು ಛಲವಾದಿ ಮಹಾಸಭಾದಿಂದ 51 ಜೋಡಿಗಳ ಸಾಮೂಹಿಕ ವಿವಾಹ



❑ ನೈಜ್ಯ ದೆಸೆ ನ್ಯೂಸ್

**ಈ ನಾಡಿನ ಮಹಾನ್ ಶರಣರಾದ ಬುದ್ಧ, ಬಸವರ ಜಯಂತಿಯ ಅಂಗವಾಗಿ ಏಪ್ರಿಲ್ 20 ರಂದು 51 ಜೋಡಿಗಳ ಸಾಮೂಹಿಕ ವಿವಾಹವನ್ನು ಸಿಂಧನೂರು ಪಿಡಬ್ಲ್ಯೂಡಿ ಕ್ಯಾಂಪಿನ ಯಮನೂರಪ್ಪ ದರ್ಗಾದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಛಲವಾದಿ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ವೀರೇಶ ಹಂಚಿನಾಳ ಹೇಳಿದರು.**


ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ನೋಂದಣಿಗೆ ಮಾರ್ಚ್ 30 ಕೊನೆಯ ದಿನಾಂಕವಾಗಿದೆ. ವಧುವರರ ವಯಸ್ಸು ವರನಿಗೆ 21ವರ್ಷ, ವಧುವಿಗೆ 19 ವರ್ಷ ಕಡ್ಡಾಯ. ವಧು-ವರರ ಹಾಗೂ ತಂದೆ-ತಾಯಿಯರ ಆಧಾರ ಕಾರ್ಡ್, ಜಾತಿ ಆದಾಯ ಪ್ರಮಾಣ ಪತ್ರ, ವಾಸಸ್ಥಳ, ವಯಸ್ಸಿನ ಪ್ರಮಾಣ ಪತ್ರ ಝರಾಕ್ಸ್ ಪ್ರತಿ ಹಾಗೂ ಇತ್ತೀಚಿನ ಭಾವಚಿತ್ರ ಕೊಡಬೇಕು ಎಂದು ತಿಳಿಸಿದರು.

ಈ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ರಾಜ್ಯ ಅದ್ಯಕ್ಷ ನಿವೃತ್ತ ಐಎಎಸ್ ಅಧಿಕಾರಿಯಾದ ಸಿದ್ದಯ್ಯ ಅವರು ಆಗಮಿಸುವರು, ಸಮಾಜದ ಮುಖಂಡರು, ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು, ಸಮಾಜದ ಬಂದು-ಬಾಂಧವರು ಆಗಮಿಸಿ ವಧು-ವರರಿಗೆ ಆರ್ಶೀವದಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ: ಸಂಘಟನೆ ಪ್ರಧಾನ ಕಾರ್ಯದರ್ಶಿ ಅಂಬಣ್ಣ ಮಲ್ಲಾಪುರ, ಶರಣಪ್ಪ ಸೋಮನಾಳ, ಮಾರೆಪ್ಪ ರಾಮತ್ನಾಳ್, ಕುಬೇರಪ್ಪ ಹೊಸಳ್ಳಿ, ಹನುಮಂತ ಮಲ್ಲಾಪುರ, ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಅಂಬಿಗರ ಚೌಡಯ್ಯನವರ ಜೀವನ ಮೌಲ್ಯಗಳನ್ನು ಅರಿಯೋಣ: ಸಚಿವರಾದ ಎನ್.ಎಸ್.ಬೋಸರಾಜು ಸಲಹೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 21 (ಕರ್ನಾಟಕ ವಾರ್ತೆ): ಸಮಾಜದಲ್ಲಿನ ಅನಾಚಾರ, ಅಪನಂಬಿಕೆಗಳನ್ನು ನಿರ್ಭೀತಿಯಿಂದ ಟೀಕಿಸಿ ಕ್ರಾಂತಿ-ಕಾರಿ ಶರಣರು ಎಂದು ಹೆಸರಾದ ನಿಜಶರಣ ಅಂಬಿಗರ ಚೌಡಯ್ಯನವರ ಆಚಾರ-ವಿಚಾರಗಳನ್ನು ನಾವೆಲ್ಲರು ಅರಿತು ನಡೆಯಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಹೇಳಿದರು.**



ಜನವರಿ 21ರ ಬುಧವಾರ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯ ಅವರು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಂಬಿಗರ ಚೌಡಯ್ಯನವರು ತಮ್ಮ ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಎತ್ತಿ ಹಿಡಿದರು. ಬಸವಣ್ಣನವರ ಅನುಯಾಯಿಗಳಾದ ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಜೀವನದ ಸಾರವೇ ಅಡಗಿದೆ ಎಂದು ತಿಳಿಸಿದರು. ಈ ವೇಳೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ. ಎಸ್.ಶಿವರಾಜ ಪಾಟೀಲ್ ಅವರು ಮಾತನಾಡಿ, ಅಂಬಿಗರ ಚೌಡಯ್ಯನವರು ವಚನಗಳ ಮೂಲಕ ಸಮಸಮಾಜ ಕಟ್ಟುವ ಕೆಲಸ ಮಾಡಿದರು ಎಂದು ತಿಳಿಸಿದರು. ಬಹುಸಂಖ್ಯಾತರಾದ ಗಂಗಾಮಸ್ಥ-ರಿಗೆ ಸಮಾಜದಲ್ಲಿ ಸರಿಯಾದ ರೀತಿಯಲ್ಲಿ ಪ್ರಾತಿನಿಧ್ಯ ಸಿಗಬೇಕು. ಈ ನಿಟ್ಟಿನಲ್ಲಿ ಸಮಾಜದ ಕೆಲಸ ಕಾರ್ಯಗಳನ್ನು ಪಕ್ಷಾತೀತವಾಗಿ ಮಾಡಲಾಗುತ್ತದೆ. ಸಮಾಜದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ದೊಡ್ಡದೊಡ್ಡ ಹುದ್ದೆಗಳನ್ನು ಅಲಂಕರಿಸಬೇಕು ಎಂದರು. ಗಂಗಾಮತಸ್ಥ ಸಮಾಜದ ಜಿಲ್ಲಾಧ್ಯಕ್ಷರಾದ ಕೆ.ಶಾಂತಪ್ಪ ಅವರು ವಿಶೇಷ ಉಪನ್ಯಾಸ ನೀಡಿ, ಚೌಡಯ್ಯನವರು ಯಾವುದೇ ಜಾತಿಗೆ ಸೀಮಿತವಲ್ಲ. ಅವರು ಮೂರ್ತಿ ಪೂಜೆಗೆ ಅವಕಾಶ ಕೊಡಲಿಲ್ಲ. ಅಂತಹ ನೇರ ನಿಷ್ಠುರ ಅಂಬಿಗರ ಚೌಡಯ್ಯನವರ ತಿಳಿಸಿದ ಸನ್ಮಾರ್ಗದಲ್ಲಿ ನಾವು ನಡೆಯಬೇಕು. ಚೌಡಯ್ಯನವರು ಬಸವನ ತತ್ವವನ್ನು ಒಪ್ಪಿ ಅನುಭವ ಮಂಟಪಕ್ಕೆ ಹೋದರು. ಮೂಢನಂಬಿಕೆಯಲ್ಲಿ ನಾವು ಮುಳುಗಿ ಹೋಗಿದ್ದೇವೆ. ಅಂತಹ ಮೂಢನಂಬಿಕೆಗಳಿಂದ ನಾವು ಹೊರ ಬರಬೇಕು. ನಮಗೆ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ ಇದ್ದು, ಆ ಗುರುಗಳ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯಬೇಕು. ನಮ್ಮ ಆಚಾರ ವಿಚಾರ, ಸಂಸ್ಕೃತಿಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕು. ವಿದ್ಯಾರ್ಥಿಗಳಲ್ಲಿ ಸಂಸ್ಕಾರವನ್ನು ಕಲಿಸಬೇಕು. ಸಮಾಜದ ಬಗ್ಗೆ ತಿಳಿಹೇಳಬೇಕು ಎಂದರು. ಸಮಾಜದ ವಿವಿಧ ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರಿಗೆ ಗಣ್ಯರಿಂದ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ, ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ಸಮಾಜದ ಮುಖಂಡರಾದ ಕೆ.ಶರಣಪ್ಪ, ಲಲಿತಾ ಕಡಗೋಳ, ಶರಣಪ್ಪ ಕಡಗೋಳ, ಕುರ್ಡಿ ಲಕ್ಷ?ಮಣ, ರಂಗ ದೇಸಾಯಿ, ರಾಜೇಶ್ವರಿ ಸೇರಿದಂತೆ ಇತರರು ಇದ್ದರು. ಗಣ್ಯರಿಂದ ಮಾಲಾರ್ಪಣೆ: ವೇದಿಕೆಯ ಕಾರ್ಯಕ್ರಮಕ್ಕೂ ಮೊದಲು ನಗರದ ಬಿ.ಆರ್.ಬಿ. ಸರ್ಕಲ್ ಹತ್ತಿರವಿರುವ ಅಂಬಿಗರ ಚೌಡಯ್ಯನವರ ಪುತ್ಥಳಿ ನಡೆದ ಕಾರ್ಯಕ್ರಮದಲ್ಲಿ ಕಿಲ್ಲೇ ಬೃಹನ್ಮಠದ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮೀಜಿ, ಸೋಮವಾರಪೇಟೆ ಹಿರೇಮಠದ ಅಭಿನವ ರಾಚೋಟಿ ವೀರಶಿವಾಚಾರ್ಯ ಸ್ವಾಮೀಜಿ ಹಾಗೂ ಸಚಿವರಾದ ಎನ್.ಎಸ್.ಬೋಸರಾಜು, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಸೇ-ರಿದಂತೆ, ಮಾಜಿ ಸಂಸದರಾದ ಬಿ.ವಿ.ನಾಯಕ, ಮಾಜಿ ಶಾಸಕರಾದ ಎ.ಪಪ್ಪರೆಡ್ಡಿ, ರಾಯಚೂರು ನಗರಸಭೆಯ ಮಾಜಿ ಅಧ್ಯಕ್ಷರಾದ ಲಲಿತಾ ಕಡಗೋಳ, ಮುಖಂಡರಾದ ಕೆ.ಶಾಂತಪ್ಪ, ಕೆ.ಶರಣಪ್ಪ, ಕುರ್ಡಿ ಲಕ್ಷ?ಮಣ, ಹೊನ್ನಪ್ಪ, ಶ್ರೀನಿವಾಸ್, ಪಿ.ಪರಮೇಶ್, ಕೆ.ತಿಮ್ಮಪ್ಪ, ಪಿ.ಈರೇಶ, ಈರೇಶ ಜಾಲಗೇರಿ, ಕೆ.ನರಸಿಂಹ, ಇ.ಶಿವರಾಮ್, ಹನುಮಂತು ಕಡಗೋಳ ಸೇರಿದಂತೆ ಇತರರು ಅಂಬಿಗರ ಚೌಡಯ್ಯನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

# ನಿಜಶರಣ ಅಂಬಿಗಾರ ಚೌಡಯ್ಯ ಜಯಂತಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಿಜಶರಣ ಅಂಬಿಗಾರ ಚೌಡಯ್ಯ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಈ ಸಂದರ್ಭ ಅಂಬಿಗಾರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ತಹಶೀಲ್ದಾರ್ ಭೀಮರಾಯ ಬಿ. ರಾಮಸಮುದ್ರ ಅವರು, 12ನೇ ಶತಮಾನದಲ್ಲಿ ಶರಣರು ಅನುಭವ ಮಂಟಪದ ಮೂಲಕ ಪ್ರಪಂಚಿಕ ಜೀವನದ ಪರಿಕಲ್ಪನೆಯನ್ನು ಸಮಾಜಕ್ಕೆ ನೀಡಿದ ಮಹತ್ವವನ್ನು ಸ್ಮರಿಸಿದರು.**



ಶರಣರು ಮಾತಿನ ಮೂಲಕ ನೀಡಿದ ಪ್ರಮಾಣವನ್ನೇ ವಚನ ಎಂದು ಕರೆಯಲಾಗುತ್ತಿದ್ದು, ಶರಣರಲ್ಲಿ ಅಂಬಿಗಾರ ಚೌಡಯ್ಯನವರು 'ನಿಜಶರಣ' ಎಂಬ ಗೌರವ ಪಡೆದಿರುವುದು ಅವರ ವೈಚಾ-ರಿಕ ಶ್ರೇಷ್ಠತೆಯ ಪ್ರತೀಕವಾಗಿದೆ ಎಂದರು. ಅಂಬಿಗಾರ ಚೌಡಯ್ಯನವರ ವಚನಗಳಲ್ಲಿ ಸಾಮಾಜಿಕ ವ್ಯವಸ್ಥೆಯ ವಿಡಂಬನೆ ಸ್ಪಷ್ಟವಾಗಿ ಕಾಣುತ್ತದೆ. ಇಂದಿಗೂ ವಚನಗಳ ತಾರ್ಕಿಕತೆಯನ್ನು ಸಂಪೂರ್ಣವಾಗಿ ಅಥ-'ರ್ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅಂತಹ ಶರಣರ ವಚನಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮದಾಗಿದೆ. ಅವರ ಜೀವನ ಹಾಗೂ ತತ್ವಾದರ್ಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ವೇಳೆ ಬಸವರಾಜ ಚೌಡ್ಕಿ ಅವರು ನಿಜಶರಣ ಅಂಬಿಗಾರ ಚೌಡಯ್ಯನವರ ಜೀವನ ಮತ್ತು ತತ್ವಾದರ್ಶಗಳ ಕು-ರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಗ್ರೇಡ್?2 ತಹಶೀಲ್ದಾರ್ ಅಬ್ದುಲ್ ವಾಹಿದ್, ತಾಲೂಕು ಗಂಗಮತಸ್ಥರ ಸಮಾಜದ ಅಧ್ಯಕ್ಷ ವೆಂಕಟೇಶ ಸುಂಕೇಶ್ವರ, ಗೌರವಾಧ್ಯಕ್ಷ ನಾಗೇಶ ಕಬ್ಬೆರ, ಬೀಮರಾಯ ಸೀತಮನಿ, ನಿವೃತ್ತ ಎ.ಎಸ್.ಐ. ಈರಪ್ಪ, ಕಾರ್ಯದರ್ಶಿ ಮಂಜುನಾಥ ಮಾಡಗಿರಿ, ಬಸಪ್ಪ, ಮಹಾದೇವಪ್ಪ, ಕಾಶಿನಾಥ ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಶಾಸಕ ಹಂಪನಗೌಡ ಬಾದರ್ಲಿ ಸಭೆ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜ 21 ಶಾಸಕರ ಕಾರ್ಯಾಲಯದಲ್ಲಿ ತಾಲ್ಲೂಕಿನಲ್ಲಿ ಜೋಳ ಖರೀದಿ ಕೇಂದ್ರಗಳ ಕಾರ್ಯಾಚರಣೆಯಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಕು-ರಿತು ವಿಸ್ತೃತವಾಗಿ ಚರ್ಚಿಸಲಾಯಿತು. ಈ ಹಿನ್ನೆಲೆಯಲ್ಲಿ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಸಭೆ ನಡೆಸಿದರು.**

ಸಭೆಯಲ್ಲಿ ಜೋಳ ಖರೀದಿಯಲ್ಲಿ ರೈತರು ಅನುಭವಿಸುತ್ತಿರುವ ತೊಂದರೆಗಳು, ಕೇಂದ್ರಗಳಲ್ಲಿ ಸರಿಯಾದ ಸಮಯಕ್ಕೆ ಖರೀದಿ ನಡೆಯದಿರುವುದು, ತೂಕಮಾಪನದ ಗೊಂದಲ, ದಾಖಲೆ ಪರಿಶೀಲನೆ ಹಾಗೂ ಪಾವತಿ ವಿಳಂಬದಂತಹ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಲಾಯಿತು. ರೈತರು ಅನಗತ್ಯವಾಗಿ ಕೇಂದ್ರಗಳ ಮುಂದೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಶಾಸಕರು ಸ್ಪಷ್ಟ ಸೂಚನೆ ನೀಡಿದರು. ಸರ್ಕಾರದ ನಿಯಮಾನುಸಾರ ಕನಿಷ್ಠ ಬೆಂಬಲ ಬೆಲೆಯಲ್ಲಿ (MSP) ಜೋಳ ಖರೀದಿ ಮಾಡಬೇಕು, ಯಾವುದೇ ಅಕ್ರಮ, ನಿರ್ಲಕ್ಷ್ಯ ಅಥವಾ ದಲ್ಲಾಳಿಗಳ ಹಸ್ತಕ್ಷೇಪಕ್ಕೆ ಅವಕಾಶ ನೀಡಬಾರದು ಎಂದು ಕಟ್ಟುನಿಟ್ಟಾಗಿ ಎಚ್ಚರಿಸಿದರು.

ಖರೀದಿ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿರಬೇಕು ಹಾಗೂ ರೈತ-ರಿಗೆ ಸಮಯಕ್ಕೆ ತಕ್ಕಂತೆ ಪಾವತಿ ಮಾಡಬೇಕೆಂದು ತಿಳಿಸಿದರು. ಹಾಗೆಯೇ, ಸಮಸ್ಯೆಗಳು ಉಂಟಾದಲ್ಲಿ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳಬೇಕು ಎಂದು ಸೂಚಿಸಿ, ರೈತರ ಹಿತಾಸಕ್ತಿಯನ್ನು ಕಾಪಾಡುವುದು ಎಲ್ಲರ ಕರ್ತವ್ಯ ಎಂಬ ಸಂದೇಶವನ್ನು ಮಾನ್ಯ ಶಾಸಕರು ಈ ಸಭೆಯಲ್ಲಿ ಪುನರುಚ್ಚರಿಸಿದರು.

# ಕೊತ್ತದೊಡ್ಡಿ: ಅದ್ದೂರಿಯಾಗಿ ಜರುಗಿದ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯನವರ ಜಯಂತಿ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ಕೋತ್ತದೊಡ್ಡಿ ಗ್ರಾಮದಲ್ಲಿ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯನವರ 906 ನೇ ಜಯಂತಿ ಅಂಗವಾಗಿ ಇಂದು ಗ್ರಾಮದಲ್ಲಿ ಶ್ರೀಚೌಡೇಶ್ವರ ದೇವಿ ದೇವಸ್ಥಾನದಿಂದ ಭವ್ಯ ಮೇರವಣಿಗೆ ಟ್ರ್ಯಕ್ಟರ್ ಅಲಂಕಾರ ಗೊಂಡಿರುವ ವಾಹನದಲ್ಲಿ ಭಾವ ಚಿತ್ರವನ್ನು ಅದ್ದೂರಿಯಾಗಿ ಮೇರವಣಿಗೆ ಮೂಲಕ ಪ್ರಮುಖ ರಸ್ತೆಯಲ್ಲಿ ಸಮಾಜದ ಹಾಗೂ ಗ್ರಾಮದ ಸುಮಂಗಲೆಯರು 101 ಪುರ್ಣ ಕೂಂಭ ಕಳಶದೊಂದಿಗೆ ಬಾಜಿ ಬಜಂತ್ರಿ ಡೊಳ್ಳು ವ್ಯಾದಗಳೊಂದಿಗೆ ಕೊತ್ತದೊಡ್ಡಿ ಗ್ರಾಮದ ಹೊರವಲಯದಲ್ಲಿರುವ ಶ್ರೀಅಂಬಿಗರ ಚೌಡಯ್ಯನವರ ವೃತದವರಿಗೂ ಭವ್ಯ ಮೇರವಣಿಗೆ ಮೂಲಕ ಗ್ರಾಮಸ್ಥರು ಅಂಬಿಗರ ಚೌಡಯ್ಯನವರ ವಚನಗಳನ್ನು ದ್ವನಿವರ್ದಕ ಮೂಲಕ ಆಲಿಸಿಸುತ್ತಾ ಸಾಗಿದರು.**



ಗ್ರಾಮದಲ್ಲಿನ ಸಮಾಜದವರು ಹಾಗೂ ಗ್ರಾಮಸ್ಥರು, ಜನಪ್ರತಿನಿಧಿಗಳು,ಯುವಕರು ಇತರರು ಸೇರಿದಂತೆ ಅಂಬಿಗರ ಚೌಡಯ್ಯನವರ ವೃತದಲ್ಲಿನ ನಾಮಫಲಕ ವಿರುವ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಲಾಯಿತು. ಸಂದರ್ಭದಲ್ಲಿ ಕೆಂಚಮ್ಮ ಪೂಜಾರಿ,ಹನುಮಂತ ರಾಯಪೂಜಾರಿ,ಆಂಜನೇಯ ಕಂದಲಿ ತಾಲೂಕು ಹಿಂದುಳಿದ ವರ್ಗಗಳಉಪಾಧ್ಯಕ್ಷರು, ಗೋವಿಂದರಾಜ ಚಿಕ್ಕಗುಡ್ಡ ಮಾಜಿ ತಾ.ಪಂ.ಸದಸ್ಯರು. ಕೆ.ಮಲ್ಲು ಅಂಭಿಗರಚೌಡಯ್ಯ ರಿಯರಾದ ಹನುಂತ್ರಾಯನಾಯಕ ಮಟ್ಲ, ಭೀಮಣ್ಣ ಡಂಡಂಬಳ್ಳಿ, ಭೀಮಪ್ಪದಾಸರ, ಬಾಲಪ್ಪ ಕಂದಳ್ಳಿ, ನಾಗಪ್ಪಗೌಡಪೋಲಿಸ್ ಪಾಟೀಲ್, ಬಜ್ಜಯ್ಯಗೌಡ, ಹನುಂತ್ರಾಯ ಚಿಕ್ಕಗುಡ್ಡ, ಹನುಮಂತಭಾವಿಮನಿ, ದೇವಿಂದ್ರಗಾಲಿ, ಹನುಮಂತ್ರಯಗುಜುಪು,. ಬೀಮಣ್ಣಚಿಕ್ಕಗುಡ್ಡ ಎಸ್ ಡಿ ಎಂಸಿ ಅಧ್ಯಕ್ಷರು, ಹನುಂತ್ರಆಯಕರಿಗುಡ್ಡ,ಅಂಬ-ರೀಶ್ ಗುಂತಗುಳಿ, ಪ್ರಭುರಾಯ ಚಿಕ್ಕಗುಡ್ಡ, ಹನುಮಂತ್ರಾಯಮಸ್ಕಿ, ಮಹಾದೇವಪ್ಪ ಕಂದಳ್ಳಿ,-ಅಯ್ಯಳಪ್ಪಮಾನ್ವಿ, ವಡಿಕೇಶ್‌ಮಾನ್ವಿ, ಬಸವರಾಜ ಗೋರ್ಕಲ್,ಶಿವಣ್ಣಕಂದಳ್ಳಿ, ಮುದಕಪ್ಪ, ಹೊನ್ನಪ್ಪಡಂದಂಬಳ್ಳಿ ,ಆದೇಪ್ಪ ಕಂದಳ್ಳಿ, ಶರಣಬಸವ, ಮಂಜುನಾಥ ತೆಲಗರ್,ಹನುಮರಡ್ಡಿ ಮಾನ್ವಿ ಭೀಮಶೆಪ್ಪ, ನವಶಪ್ಪ ದಾಸರ, ಹನುಮಂತ್ರಾಯ ತೆಲಗರ ಸಾಬಯ್ಯ ಗಬ್ಬೂರ, ಬೀಮಣ್ಣಕಂಕರ, ಮಾರೆಪ್ಪ ಭೋವಿ, ಭೀಮಣ್ಣ ಗುತ್ತೆದಾರ, ಸಾಬಣ್ಣ,ನಾಗಪ್ಪಭಾವಿಮಾನಿ, ಸಿದ್ದುಪಮಗೇನ್ ಸೇರದಿಂತೆ ಗ್ರಾಮಸ್ಥರು ಯುವಕರು ಉಪಸ್ಥಿತರಿದ್ದರು. ಅತ್ಯಂತ ಸಂಭ್ರಮದಿಂದ ಕಾರ್ಯಕ್ರಮ ಜರುಗಿ-ತುಕಾರ್ಯಕ್ರಮದಲ್ಲಿ ಎಲ್ಲಾ ಸಮಾಜದ ಬಾಂದವರು ಭಾಗವಹಿಸಿದ್ದರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾರಿಗೂ ಗೋಧಿ ಉಗ್ಗಿ ಅನ್ನ ಸಾಂಬಾರು ಊಟದ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಿದ್ದರು.

## ನೇಮಕಾತಿ ಪ್ರಕಟಣೆ

DHFWS ಮೈಸೂರು ನೇಮಕಾತಿ 2026 – 67 ವೈದ್ಯಕೀಯ ಮತ್ತು ನರ್ಸಿಂಗ್ ಅಧಿಕಾರಿಗಳ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ DHFWS ಮೈಸೂರು ನೇಮಕಾತಿ 2026: 67 ವೈದ್ಯಕೀಯ ಮತ್ತು ನರ್ಸಿಂಗ್ ಅಧಿಕಾರಿಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಮೈಸೂರು ಜನವರಿ 2026 ರ DHFWS ಮೈಸೂರು ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಕೀಯ ಮತ್ತು ನರ್ಸಿಂಗ್ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ ಮೈಸೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜನವರಿ 27, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 19–01–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27–ಜನವರಿ–2026 ಅಧಿಕೃತ ವೆಬ್‌ಸೈಟ್: mysore.nic.in

# ಜಿಲ್ಲಾ ಘೋಷಣೆಗೂ ಮೊದಲು ಜನರ ಮೂಲಭೂತ ಸಮಸ್ಯೆಗಳಿಗೆ ಸ್ಪಷ್ಟ ಕಾರ್ಯಯೋಜನೆ ಪ್ರಕಟಿಸಿ.

## ಶಾಸಕರೇ ಅಭಿವೃದ್ಧಿ ಘೋಷಣೆಗಳು ಬೇಡ ಸ್ವಾಮಿ, ನಮಗೆ ನೆಲದ ಮೇಲೆ ಕೆಲಸ ಬೇಕು: ಎಂ.ಗಂಗಾಧರ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು ನಗರ ಮತ್ತು ತಾಲೂಕು ಒಂದು ವಿಚಿತ್ರ ಸ್ಥಿತಿಯಲ್ಲಿ ನಿಂತಿದೆ. ಒಂದೆಡೆ, ಇಲ್ಲಿನ ಶಾಸಕರಾದ ಹಂಪನಗೌಡ ಬಾದರ್ಲಿ ಹಾಗೂ ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಸಿಂಧನೂರನ್ನು ಜಿಲ್ಲಾ ಮಾಡಬೇಕೆಂದು ಸಭೆ, ಪುಸ್ತಕ, ವಿಡಿಯೋಗಳ ಮೂಲಕ ಜನ ಬೆಂಬಲ ಕೋರಿದ್ದಾರೆ.**

ಸಿಂಧನೂರು ಜಿಲ್ಲಾ ಆಗುವುದಕ್ಕೆ ನಮ್ಮ ತಕರಾರು ಇಲ್ಲ. ಜಿಲ್ಲಾ ಆಗಲಿ ಅದು ಜನರ ಹಕ್ಕು, ಆದರೆ ಪ್ರಶ್ನೆ ಇದು ಜಿಲ್ಲಾ ಘೋಷಣೆಯಿಂದ ಜನರ ಹೊಟ್ಟೆ ತುಂಬುತ್ತದೆಯಾ? ಬಾಡಿಗೆ ಮನೆಯಲ್ಲಿ ಬದುಕುತ್ತಿರುವ ಸಾವಿರಾರು ಶ್ರಮಿಕರಿಗೆ ಹಕ್ಕುಪತ್ರ ಸಿಗುತ್ತದೆಯಾ? ಬೆಳೆಗೆ ನೀರಿಲ್ಲದೆ ಗುಳೆ ಹೋಗುವ ರೈತರ ಬದುಕು ಬದಲಾಗುತ್ತದೆಯಾ? ಈ ವಿಷಯಗಳು ಚರ್ಚೆಯಾಗುತ್ತಿಲ್ಲ. ಶಾಸಕದ್ವಯರು ಉತ್ತರ ಕೊಡಬೇಕು ಎಂದು ಸಂಘ ಮನವಿ ಪತ್ರ ಸಲ್ಲಿಸಿದೆ. ಸಿಂಧನೂರಿನಲ್ಲಿ ಇಂದು ಬೀದಿಗೆ ಬಿದ್ದ ಬೀದಿ ಬದಿ ವ್ಯಾಪಾರಿಗಳು, ಹೋಟೆಲ್ ಕಾರ್ಮಿಕರು, ಕೂಲಿ ಕಾರ್ಮಿಕರು, ಹಮಾಲಿ ಮಾಡುವ ಶ್ರಮಿಕರು, ಕಸ ಮುಸುರೆ, ಬಟ್ಟೆ ತೊಳೆಯುವ ಗೃಹ ಕಾರ್ಮಿಕರು ಸೇ–



ರಿದಂತೆ ಸಾವಿರಾರು ಕುಟುಂಬಗಳು ಬಾಡಿಗೆ ಮನೆಗಳಲ್ಲಿ, ಅಸ್ಥಿರ ಬದುಕಿನಲ್ಲಿ, ಯಾವುದೇ ಹಕ್ಕು ಪತ್ರವಿಲ್ಲದೆ ಬದುಕುತ್ತಿದ್ದಾರೆ.


ಇವರ ಬದುಕಿನ ಪ್ರಶ್ನೆಗೆ ಯಾವ ಶಾಸಕರ ಸಭೆಯಲ್ಲೂ ಚರ್ಚೆಗೆ ಬರಲೇ ಇಲ್ಲಾ ಬಂದರೂ ಉತ್ತರ ಇಲ್ಲ. ತಾಲೂಕಿನಾದ್ಯಂತ ಸರ್ಕಾರಿ ಭೂಮಿ ದಲ್ಲಾಳಿಗಳ ನೆಲಗಳ್ಳರ ಪಾಲಾಗುತ್ತಿದೆ. ದಲಿತ, ಅಲ್ಪಸಂಖ್ಯಾತ, ಹಿಂದುಳಿದ, ಭೂಹೀನ ಬಡವರಿಗೆ ಭೂಮಿ, ನಿವೇಶನ ಸಿಗುತ್ತಿಲ್ಲ. ಡಿಗ್ರಿ ಮೇಲೆ ಡಬಲ್ ಡಿಗ್ರಿ ಮಾಡಿದ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗವಿಲ್ಲ. ನಿವೇಶನ ರಹಿತರಿಗೆ ಅಕ್ರಮ ಎಂಬ ಮುದ್ರೆ ಅಂಟಿಸಲಾಗುತ್ತಿದೆ. ಇನ್ನೊಂದೆಡೆ, ಟಿಬಿಡ್ಯಾಮ್ ಗೇಟ್ ಕೂಡಿಸುವ ಹೆಸರಿನಲ್ಲಿ ತುಂಗಭದ್ರಾ ಕಾಲುವೆಗೆ 2ನೇ ಬೆಳೆಗೆ ನೀರು ಇಲ್ಲ, ತುತ್ತು ಅನ್ನಕ್ಕಾಗಿ ಗುಳೆ ಹೋಗುವ ಪರಿಸ್ಥಿತಿಗೆ ತಾಲೂಕಿನ ಜನರನ್ನ ತಳ್ಳಲ್ಪಟ್ಟಿದ್ದಾರೆ.

ಶಾಸಕರೇ ಅಭಿವೃದ್ಧಿ ಘೋಷಣೆಗಳು ಬೇಡ ಸ್ವಾಮಿ, ನಮಗೆ ನೆಲದ ಮೇಲೆ ಕೆಲಸ ಬೇಕು. ಜಿಲ್ಲಾ ಘೋಷಣೆಗೂ ಮೊದಲು ಜನರ ಮೂಲಭೂತ ಸಮಸ್ಯೆಗಳಿಗೆ ಸ್ಪಷ್ಟ ಕಾರ್ಯಯೋಜನೆ ಪ್ರಕಟಿಸಿ. ಇದು ಜಿಲ್ಲಾ ಪ್ರಶ್ನೆಯಲ್ಲ ಇದು ಬದುಕಿನ ಪ್ರಶ್ನೆ, ಇದು ಹೊಟ್ಟೆಯ ಪ್ರಶ್ನೆ, ಇದು ಹಕ್ಕಿನ ಪ್ರಶ್ನೆ, ಇದಕ್ಕೆ ಮಾನ್ಯ ಹಂಪನಗೌಡರು ಮತ್ತು ಮಾನ್ಯ ಬಸನಗೌಡರು ಇಬ್ಬರು ಶಾಸಕದ್ವಯರು ಉತ್ತರ ಕೊಡಬೇಕು, ಜನರಿಗೆ ಈಗ ಬೇಕಾಗಿರುವುದು ಹಕ್ಕುಪತ್ರ, ಭೂಮಿ, ಮನೆ, ನೀರು, ಉದ್ಯೋಗ, ಸಂಘಟನೆಯ ಬೇಡಿಕೆಗಳ ಬಗ್ಗೆ ಸ್ಪಷ್ಟ ಕಾಲಮಿತಿಯೊಳಗಿನ ಲಿಖಿತ ಉತ್ತರ ಮತ್ತು ಕಾರ್ಯಯೋಜನೆ ನೀಡದೆ ಇದ್ದರೆ ಸಿಪಿಐ (ಎಂಎಲ್) ರೆಡ್ ಸ್ಟಾರ್ ಹಾಗೂ ಕರ್ನಾಟಕ ರೈತ ಸಂಘ ಸಿಂಧನೂರು ತಾಲೂಕು ಜಂಟಿ ಸಮಿತಿಗಳು ತಾಲೂಕಿನ ಶ್ರಮಿಕ ಜನರನ್ನು ಸಂಘಟಿಸಿ ತೀವ್ರ ಹೋರಾಟದ ಹಾದಿಗೆ ಹಂತ ಹಂತವಾಗಿ ಇಳಿಯಬೇಕಾಗುತ್ತದೆ ಎಂಬುದನ್ನು ಎಚ್ಚರಿಕೆಯಿಂದ ತಿಳಿಸುತ್ತೇವೆ ಎನ್ನುವ ಮನವಿಯನ್ನು ತಹಶೀಲ್ದಾರ್ ಮತ್ತು ಪೌರಾಯುಕ್ತರಿಗೆ ಮಂಗಳವಾರ ಸಲ್ಲಿಸಲಾಯಿತು. ಇದೇ ವೇಳೆ ಎಂ.ಗಂಗಾಧರ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದರು. ಹೆಚ್.ಆರ್. ಹೊಸಮನಿ, ಹನುಮಂತಪ್ಪ ಗೋಡಿಹಾಳ, ಹುಲುಗಪ್ಪ ಬಳ್ಳಾರಿ, ರಾಮು, ಧರಗಯ್ಯ, ಶಂಕ್ರಪ್ಪ, ಅಂಬಣ್ಣ, ಭಾರತಿ, ಹುಸೇನಬ್ಬಿ, ಹುಸೇನಮ್ಮ, ದ್ರಾಕ್ಷಯಣಮ್ಮ, ಮಹಿಮುದ ಬೇಗಮ್, ಮಹಾದೇವಮ್ಮ, ಯಮನೂರ, ಕೇಶವ, ಶಿವು, ಯಲ್ಲಪ್ಪಗೌಡ, ಕಾಶೀನಾಥ, ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಹಾಲಾಪೂರ ನಾಡಕಚೇರಿಯಲ್ಲಿ ಶ್ರೀ ಅಂಬಿಗರ ಚೌಡಯ್ಯ ಜಯಂತಿ

❏ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ ನಾಡಕಚೇರಿಯಲ್ಲಿ 12ನೇ ಶತಮಾನದ ಶ್ರೇಷ್ಠ ಶಿವಶರಣರು, ವಚನಕಾರರಲ್ಲಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ರವರ ಸಾಮಾಜಿಕ ನ್ಯಾಯದ ಪರಿವರ್ತನೆ ಬದಲಾವಣೆ ಅತ್ಯಂತ ಮಹತ್ವಪೂರ್ಣ ಹೆಜ್ಜೆ ಇಟ್ಟಿರುವ ಶ್ರೇಷ್ಠ ಮಹನ್ ಪುರುಷರು, ಇವರು ವೃತ್ತಿಯಲ್ಲಿ ಅಂಬಿಗರು, ಪ್ರವೃತ್ತಿಯಲ್ಲಿ ಅನುಭಾವಿಗಳು ನೇರ ವ್ಯಕ್ತಿತ್ವ, ನಿರ್ಭೀತ ವಚನಗಳು ನುಡಿಗಳಿಂದ ಜನಮನದಲ್ಲಿ ಅತ್ಯಂತ ಪ್ರಸಿದ್ಧತೆ ಪಡೆದಿರುವ ಪುರುಷರಾಗಿದ್ದರು,**




ಇವರು ವಿಶ್ವಜ್ಯೋತಿ ಶ್ರೀ ಬಸವೇಶ್ವರ ಇವರಿಂದ ಲಿಂಗ ದೀಕ್ಷೆಯನ್ನು ಪಡೆದರು. ಮುಂದೆ ಅಂಬಿಗರ ಚೌಡಯ್ಯ ಇವರ ವಚನಗಳ ನಾಮಾಂಕಿತವಾಗಿ ಜನರ ಹೃದಯದಲ್ಲಿ ನೆಲೆಯೂರಿತು. ಈ ಸಂದರ್ಭದಲ್ಲಿ ಗ್ರಾಮ ಲೆಕ್ಕಾಧಿಕಾರಿ ಕೃಷ್ಣಪ್ಪ, ಕಂಪ್ಯೂಟರ್ ಆಪರೇಟರ್ ಚನ್ನನಗೌಡ, ಯಂಕಪ್ಪ ತಳವಾರ, ಚಂದಪ್ಪ, ಮೌನೇಶ್ ಹಾಲಾಪೂರ ಹಾಗೂ ಇನ್ನಿತರರು ಇದ್ದರು.

## ಶ್ರಮ ಸಾಮರ್ಥ್ಯ ಯೋಜನಡಿ ವಿವಿಧ ವೃತ್ತಿಯ ಕೆಲಸಗಾರರಿಗೆ ಸುರಕ್ಷಾ ಕಿಟ್ ವಿತರಸಿದ ಶಾಸಕ ಬಾದರ್ಲಿ

❏ ನೈಜ್ಯ ದೆಸೆ ನ್ಯೂಸ್

**ಕರ್ನಾಟಕ ರಾಜ್ಯ ಮತ್ತು ಇತರೆ ಕಾರ್ಮಿಕ ಕಲ್ಯಾಣ ಮಂಡಳಿ ಹಾಗೂ ಕಾರ್ಮಿಕ ಇಲಾಖೆ ಬೆಂಗಳೂರು 2024–25ನೇ ಸಾಲಿನ ಶ್ರಮ ಸಾಮರ್ಥ್ಯ ಯೋಜನೆ ಅಡಿಯಲ್ಲಿ ವಿವಿಧ ವೃತ್ತಿಗಳ (ಎಲೆಕ್ಟ್ರೀಶಿಯನ್, ಮೇಸನ್, ವೇಲ್ಡರ್, ಕಾರ್ಪೆಂಟರ್, ತೆಯುಅಚರ್, ಮತ್ತು ಪ್ಲಾಂಟರ್, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ವಿವಿಧ ವೃತ್ತಿಗಳಲ್ಲಿ ಕೆಲಸಗಳ ಕಾರ್ಮಿಕರಿಗೆ ವೃತ್ತಿಯ ಸುರಕ್ಷಾ ಕಿಟ್ ಗಳನ್ನು ನೋಂದಾಯಿತಾ.**




ಫಲನುಭವಿಗಳಿಗೆ ಜನವರಿ 21 ಬುಧವಾರ ಶಾಸಕ ಹಂಪನಗೌಡ ಬಾದರ್ಲಿ ವಿತರಿಸಿದರು. ಈ ವೇಳೆ: ಕಾರ್ಮಿಕ ನಿರೀಕ್ಷರಾದ ವಿಜಯಲಕ್ಷ್ಮಿ, ಕಚೇರಿ ಸಿಬ್ಬಂದಿ, ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಲಿಂಗಪ್ಪ ಎಂ.ಧಡೇಸೂಗೂರು, ಪ್ರಾ.ಕೃ.ಪ.ಸ.ಸಂಘದ ಅಧ್ಯಕ್ಷ ಬಸವರಾಜ ನಿಟ್ಟೂರು ಮಲ್ಲಾಪುರ, ಪಕ್ಷದ ಮುಖಂಡರಾದ ಅಮರೇಶ ಎನ್, ಶಬ್ಬೀರ ನಾಯಕ, ಸೂಗರಪ್ಪಗೌಡ ಬನ್ನಿಗನೂರ, ಸೇರಿದಂತೆ ಅನೇಕರು ಇದ್ದರು.

# ಸುಕಾಲಪೇಟೆ ಪಿಎಂಶ್ರೀ ಶಾಲೆಯಲ್ಲಿ ಅಂಬಿಗರ ಚೌಡಯ್ಯನವರ ಜಯಂತಿ ಆಚರಣೆ.



❏ ನೈಜ್ಯ ದೆಸೆ ನ್ಯೂಸ್

**ಅಂಬಿಗರ ಚೌಡಯ್ಯನವರ ಮೂಲ ಹೆಸರು ಚೌಡೇಶ ಚೌಡದಾನಪುರ ಗ್ರಾಮದ ರಾಣೇಬೆನ್ನೂರು ತಾಲೂಕಿನ ಹಾವೇರಿ ಜಿಲ್ಲೆಯಲ್ಲಿ ಜನಿಸಿದರು.12ನೇ ಶತಮಾನದ ಶಿವಶರಣರು ಹಾಗೂ ವಚನಕಾರರು. ವೃತ್ತಿಯಿಂದ ಅಂಬಿಗ ಪ್ರವೃತ್ತಿಯಿಂದ ವಚನಕಾರರು ಬಸವಣ್ಣನವರ ಅನುಭವ ಮಂಟಪದಲ್ಲಿ ಇದ್ದವರೆಂದು ಮುಖ್ಯ ಶಿಕ್ಷಕಿ ರೇಣುಕಗೌಡರ್ ಹೇಳಿದರು.**

ಸುಕಾಲಪೇಟೆಯ ಪಿಎಂಶ್ರೀ ಉನ್ನತೀ ಕರಿಸಿದ ಸರ್ಕಾರಿ ಹಿರಿಯ ಪ್ರಾಥ–ಮಿಕ ಶಾಲೆಯಲ್ಲಿ ಅಂಬಿಗರ ಚೌಡಯ್ಯ ಅವರ ಜಯಂತಿ ಆಚರಸಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಬಸವಣ್ಣ ಅವರಿಂದ ಲಿಂಗದೀಕ್ಷೆಯನ್ನು ಪಡೆದವರು, ಕಾಯಕ ಅಂಬಿಗರ ಚೌಡಯ್ಯ ಎಂಬುದೇ ಇವರ ವಚನ ಅಂಕಿತವಾಗಿದೆ. ವಚನಕಾರರಿಗಿಂತ ಭಿನ್ನ ವಿಶಿಷ್ಟ ವ್ಯಕ್ತಿ ಇವರದು, ಇವರ ವಚನಗಳನ್ನು ಮಕ್ಕಳು ಕಂಠ ಪಾಠ ಹೇಳಿದ್ದು ಬಹಳ ಸಂತೋಷ. ವಚನಗಳನ್ನ ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಕಂಠಪಾಠ ಸ್ಪರ್ಧೆ ಏರ್ಪಡಿಸಲಾಗಿತ್ತು. ಪ್ರಥ–ಮ ತಂದೆ ಬಿ.ಶ್ರೀನಿವಾಸ ಮೂರನೇ ತರಗತಿ. ಮತ್ತು ನಾಗರತ್ನ ತಂದೆ ಮರಿಯಪ್ಪ ಆರನೇ ತರಗತಿ, ಪ್ರಥಮ ಬಹುಮಾನ, ಈಶ್ವರಿ ತಂದೆ ಬೀರಪ್ಪ ಮೂರನೇ ತರಗತಿ. ದ್ವಿತೀಯ ಬಹುಮಾನ ಮಹ್ಮದ್ ಆಶೀಫ್ ತಂದೆ ಪಕೂರುಸಾಬ್ ಮೂರನೇ ಕ್ಲಾಸ್ ತೃತೀಯ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಗಂಗೋತ್ರಿ ಪಟ್ಟಣ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ವೆಂಕೋಬ ಜಿಬಾಳಿ ಬಹುಮಾನ ವಿತರಿಸಿದರು.

ಎಸ್.ಡಿಎಂಸಿ ಅಧ್ಯಕ್ಷ ಹೊನ್ನೂರು ಕಟ್ಟಿಮನಿ ಅಧ್ಯಕ್ಷತೆ ವಹಿಸಿದ್ದರು. ಎಸ್.ಡಿಎಂಸಿ ಉಪಾಧ್ಯಕ್ಷೆ ನೇತ್ರಾವತಿ ಬಸವರಾಜ ವಿಶ್ವಕರ್ಮ, ಮುಖ್ಯ ಗುರುಗಳಾದ ಜಿ.ಗುರುಬಸಯ್ಯ. ವೆಂಕಟೇಶ ಸುಕಾಲಪೇಟೆ, ಶಿಕ್ಷಕರಾದ ಅಂಬಮ್ಮ, ಸುಧಾ ಎನ್.ಹುಳ್ಳಿ, ವೆಂಕನಗೌಡ, ಪದ್ಮಾವತಿ, ಮಮತಾ, ರೇಣುಕಾ, ದೈಹಿಕ ಶಿಕ್ಷಕ ಶೇಖರಪ್ಪ ಸೋಮಲಾಪುರ, ಸೇರಿದಂತೆ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ತಾಲೂಕಾಡಳಿತದಿಂದ ಅಂಬಿಗರ ಚೌಡಯ್ಯ ಜಯಂತಿ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಾ ಡಳಿತದ ವತಿಯಿಂದ ಬುಧವಾರ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಅರ್ಥಪೂರ್ಣ, ಅತ್ಯಂತ ಸರಳವಾಗಿ ಆಚರಿಸಲಾಯಿತು. ಶಿರಸ್ತೆದಾರ ಅನೀಲ ಚೌಹಾಣ್ ಶಿವಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆನೆರವೇರಿಸಿ ಪುಷ್ಪ ನಮನ ಸಲ್ಲಿಸಿದರು.**

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಚಂದ್ರಕಾಂತ ಯರಗಲ್ ಹಾಗೂ ಶಶಿಕಾಂತ ಮೂಕಿಹಾಳ ಮಾತನಾಡಿ ನಿಜಶರಣ ಅಂಬಿಗರ ಚೌಡಯ್ಯನವರು 12ನೇ ಶತಮಾನದಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ಕ್ರಾಂತಿಯಲ್ಲಿ ಸಾಕಷ್ಟು ಶ್ರಮಿಸಿದವರಾಗಿದ್ದಾರೆ. ಅವರೊಬ್ಬ ಶ್ರೇಷ್ಠ ವಚನಕಾರರಾಗಿದ್ದು ಅನುಭವ ಮಂಟಪದಲ್ಲಿ ಉನ್ನತ ಸ್ಥಾನವನ್ನು ಹೊಂದಿದವರಾಗಿದ್ದರು. ಅವರ ಜಯಂತಿಯನ್ನು ಆಚರಿಸುವುದರ ಜೊತೆಗೆ ಅವರ



ಬದುಕಿನ ಆದರ್ಶಗಳ ಅನುಸರಣೆಯನ್ನೂ ಮಾಡಬೇಕಾಗಿದೆ. ಸಮಾಜದಲ್ಲಿ ಒಗ್ಗಟ್ಟನ್ನು ಕಾಯ್ದುಕೊಂಡು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಮತ್ತು ಉತ್ತಮ ಸಂಸ್ಕಾರಗಳನ್ನು ಕೊಡಲು ಎಲ್ಲರೂ ಪ್ರಯತ್ನಿಸಬೇಕಾಗಿದೆ ಎಂದರು.


ಸಿ.ಆರ್.ಸಿ. ರಾಜು ವಿಜಾಪುರ ಕಾರ್ಯಕ್ರಮ ನಿರ್ವಹಿಸಿದರು. ಈ ಸಮಯದಲ್ಲಿ ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಪಿ–ಎಸ್ಐ ಜ್ಯೋತಿ ಖೋತ್, ಸಿ ಆರ್ ಸಿ ಇಬ್ರಾಹಿಂ ಆಲಮೇಲ, ಸಮಾಜದ ಅಧ್ಯಕ್ಷ ರಮೇಶ ಮೂಕಿಹಾಳ, ಪುರಸಭೆ ಮಾಜಿ ಸದಸ್ಯ ಪರಶುರಾಮ ತಂಗಡಗಿ, ನ್ಯಾಯವಾದಿ ಎಂ.ಎಸ್.ಜೋಲಿ, ಕಾಶಿನಾಥ ಮದರಿ, ಮಲ್ಲಿಕಾರ್ಜುನ ನಾಯ್ಕೋಡಿ ತೋಟಪ್ಪ ಏವೂರ, ಬಸವರಾಜ ತಳವಾರ, ಸಂಗನಬಸಪ್ಪ ಚಳ್ಳಗಿ, ಸಂಗಮೇಶ ಚಳ್ಳಗಿ, ಮಾನಪ್ಪ ನಾಯ್ಕೋಡಿ, ಮಲ್ಲಿಕಾರ್ಜುನ ನಾಟಿಕರ್, ದತ್ತು ಕೋಲಕಾರ, ಮಲ್ಲಿಕಾರ್ಜುನ ಅಸ್ಕಿ, ಭೀಮಣ್ಣ ತಳವಾರ, ಮಲ್ಲಿಕಾರ್ಜುನ್ ನೆಲ್ಲಗಿ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಗಳು ಇದ್ದರು.

# ಸಿದ್ದಗಂಗಾ ಶ್ರೀಗಳ ಕಾಯಕದಂತೆ ಕಾರುಣ್ಯ ಆಶ್ರಮದ ಸೇವೆ ನೆರವೇರುತ್ತಿದೆ: ಸದಾನಂದ ಶರಣರು

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜ21 ತ್ರಿವಿಧ ದಾಸೋಹಿಮೂರ್ತಿಗಳಾದ ಸಿದ್ದಗಂಗಾ ಮಠದ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳ 7ನೇ ವರ್ಷದ ಪುಣ್ಯರಾಧನೆಯ ದಾಸೋಹ ದಿನ ಹಾಗೂ ನಿಜ ಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ವಿಶ್ವ ಆರ್. ಎಂ.ಎಸ್.ಮೊಬೈಲ್ ಶಾಪ್ ಸಿಂಧನೂರು ವೀರೇಶಗೌಡ ಸೋಮಲಾಪುರ ಮಾಲೀಕರು– ಪ್ರಿಯಾಂಗ ಸೂಪರ್ ಮಾರ್ಕೆಟ್, ಒಳಬಳ್ಳಾರಿ ರಸ್ತೆ ಸಿಂಧನೂರು ಇವರುಗಳ ವತಿಯಿಂದ ಆಶ್ರಮದಲ್ಲಿ ಇಡೀ ದಿನದ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸಿ ಸಿದ್ದಗಂಗಾ ಶ್ರೀಗಳ ನಿಜಶರಣ ಅಂಬಿಗರ ಚೌಡಯ್ಯ ಇವರುಗಳ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.**

ಈ ಕಾರ್ಯಕ್ರಮದಲ್ಲಿ ಸಿಂಧನೂರು ತಾಲೂಕಿನ ಬಂಗಾರಿ ಕ್ಯಾಂಪಿನ ಪರಮಪೂಜ್ಯ ಶ್ರೀ ಸದಾನಂದ ಶರಣರ ಪಾದ ಪೂಜಾ ಸಮಾರಂಭ ಕಾರ್ಯಕ್ರಮ ಹಾಗೂ ಪರಮಪೂಜ್ಯರಿಗೆ



ಗೌರವ ಸಮರ್ಪಣೆ ಅರ್ಪಿಸಲಾಯಿತು. ನಂತರ ಗಂಗಾಮತ ಸಮಾಜದ ಸಿಂಧನೂರು ತಾಲೂಕ ಅಧ್ಯಕ್ಷರಾದ ರಾಮಣ್ಣ ಜವಳಗೇರಾ ಹಾಗೂ ಮುಖಂಡರಾದ ಕೋಮಾರೆಪ್ಪ ಜವಳಗೇರಾ ಇವರುಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಬಂಗಾರಿ ಕ್ಯಾಂಪಿನ ಸಿದ್ಧಾಶ್ರಮದ ಪೂಜ್ಯ ಶ್ರೀ ಸದಾನಂದ ಶರಣರು ಇಂದು ನಮ್ಮ ಸಿಂಧನೂರಿನ ಕರುಣೆಯ ಕುಟುಂಬದಲ್ಲಿ ನಡೆದಾಡುವ ದೇವರಾಗಿ ತ್ರಿವಿಧ ದಾಸೋಹಿ ಮೂರ್ತಿಗಳಾಗಿ ಅಕ್ಷರ ಅನ್ನ ಜ್ಞಾನದಾಸೋಹವನ್ನು ಮಾನವ ಧರ್ಮಕ್ಕೆ ಉಣ ಬಡಿಸಿದ ಸಿದ್ದಗಂಗಾ ಶ್ರೀಗಳು ಜಗತ್ತಿನ ಪರಮಪೂಜ್ಯರಾಗಿದ್ದಾರೆ. ಸಿದ್ದಗಂಗಾ ಶ್ರೀಗಳ ಆಶಯದಂತೆ ಕಾರುಣ್ಯ ಆಶ್ರಮದ ಕರ್ತವ್ಯ ನಾಡಿಗೆ ಅರ್ಪಣೆಯಾಗಿದೆ.

ಕಾರುಣ್ಯಾಶ್ರಮದ ಸೇವೆಯೂ ಸಿದ್ದಗಂಗಾ ಶ್ರೀಗಳ ಕಾಯಕದಂತಿದೆ. ನೊಂದ ನೆಲೆ ಇಲ್ಲದ ಜೀವಿಗಳಿಗೆ ತಮ್ಮ ಜೋಳಿಗೆಯ ಮೂಲಕ ಹರೇಟನೂರು ಹಿರೇಮಠದ ಕುಟುಂಬ ಮಾಡುತ್ತಿರುವ ಈ ಕಾಯಕ ಕಾರುಣ್ಯ ಎನ್ನುವ ಕುಟುಂಬವನ್ನು ಹುಟ್ಟು ಹಾಕಿರುವುದು ಸಿದ್ದಗಂಗಾ ಶ್ರೀಗಳ ಆದರ್ಶಕ್ಕೆ ಕಾರಣವಾಗಿದೆ. ಸಿದ್ದಗಂಗಾ ಶ್ರೀಗಳ ಕಾಯಕದಂತೆ ಕಾರುಣ್ಯ ಆಶ್ರಮದ ಸೇವೆ ನೆರವೇರುತ್ತಿದೆ. ನಿಜ ಶರಣ ಅಂಬಿಗರ ಚೌಡಯ್ಯ ಸರ್ವ ಸಮಾಜದ ಸಂತನಾಗಿ ಸಮಾಜಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ ಇಂತಹ ಶರಣರ ಕಾರ್ಯಕ್ರಮ ಕಾರುಣ್ಯ ಆಶ್ರಮದಲ್ಲಿ ಜರುಗಿರುವುದು ಅತ್ಯಂತ ಅರ್ಥ–ಪೂರ್ಣವಾಗಿದೆ ಎಂದು ಆಶೀರ್ವಚನ ನೀಡಿದರು.

ನಂತರ ಶ್ರೀ ಶಾಂಭವಿ ಪುಣ್ಯಾಶ್ರಮದ ಪೀಠಾಧಿಪತಿಗಳಾದ ವೇ. ಮೂ.ವೀರೇಶ ಯಡಿಯೂರು ಮಠ ಮಾತನಾಡಿ ಸರ್ವ ಸಮಾಜಕ್ಕೆ ಆದರ್ಶವಾಗಿರುವ ಈ ಇಬ್ಬರು ಶರಣ–ರು ನಡೆದಾಡುವ ದೇವರುಗಳಾಗಿ ಪ್ರತಿಯೊಬ್ಬ ಮಾನವರ ಹೃದಯದಲ್ಲಿ ನೆಲೆಯೂರಿರುವ ಈ ಶರಣರ ಜಯಂತಿ ಹಾಗೂ ಪುಣ್ಯರಾಧನೆ ಕಾರ್ಯಕ್ರಮ ವಿಶೇಷವಾಗಿ ನಮ್ಮ ಕಾರುಣ್ಯ ಆಶ್ರಮದಲ್ಲಿ ನೆರವೇರಿರುವುದು ಸಮಾಜಕ್ಕೆ ಉತ್ತಮ ಸಂದೇಶ ನೀಡಿದೆ. ಮತ್ತು ಈ ಕಾರ್ಯಕ್ರಮದಲ್ಲಿ ಗಂಗಾ ಮತ್ತು ಸಮಾಜದ ಎಲ್ಲಾ ಹಿರಿಯರುಗಳು ಭಾಗವಹಿಸಿರುವುದು. ನಿಜಶರಣ ಅಂಬಿಗರ ಚೌಡಯ್ಯ ಜಯಂತಿಗೆ ಅರ್ಥ ಬಂದಂತಾಗಿದೆ. ಅಕ್ಷರ ಅನ್ನ ಜ್ಞಾನ ದಾಸೋಹದ ಸಿದ್ದಗಂಗಾ ಶ್ರೀಗಳು ದಾಸೋಹದ ಮೂರ್ತಿಗಳಾಗಿ ಸಮಾಜದ ಪ್ರತಿಯೊಬ್ಬ ಶರಣರಿಗೆ ಆದರ್ಶವಾಗಿದ್ದಾರೆ.

ಅವರ ಕಾಯಕದಂತೆ ನಮ್ಮ ಕಾರುಣ್ಯ ಆಶ್ರಮದ ಚನ್ನಬಸಯ್ಯ ಸ್ವಾಮಿ ದಂಪತಿಗಳು ತಮ್ಮನ್ನು ತಾವು ಸಮಾಜಕ್ಕೆ ಮೀಸಲಿಟ್ಟಿರುವುದು ಸಿಂಧನೂರಿನ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿರುವುದು ನಮ್ಮೆಲ್ಲ–ರಿಗೆ ಸಂತೋಷವಾಗಿದೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ನಾಗರಾಜ ಸ್ವಾಮಿಗಳು ದೇವಿ ಆರಾಧಕರು ಕಾರಟಗಿ ಇವರು ದಿವ್ಯ ಸಾನಿಧ್ಯ ವಹಿಸಿದ್ದರು. ಪೂಜಾ ಕಾರ್ಯಕ್ರಮವನ್ನು ರುದ್ರಸ್ವಾಮಿ ಹಿರೇಮಠ ಪಗಡದಿನ್ನಿ ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಮಣ್ಣ ಜವಳಗೇರಾ ಅಧ್ಯಕ್ಷರು ಗಂಗಾಮತ ಸಮಾಜ ಸಿಂಧನೂರು. ಹನುಮಂತಪ್ಪ ಇಚ್ಚಂಗಿ ಉಪಾಧ್ಯಕ್ಷರು. ಕೋಮಾರೆಪ್ಪ ಜವಳಗೇರಾ ಹಿರಿಯ ಮುಖಂಡರು ಗಂಗಾಮತ ಸಮಾಜ. ಹಾಗೂ ಗಂಗಾಮತ ಸಮಾಜದ ಹಿರಿಯರುಗಳಾದ ವೀರೇಶ ಕೋರಿ ಉದ್ಬಾಳ ಇ. ಜೆ.ಬಸಪ್ಪ ಕೋರಿ. ಶ್ರೀ ಗಂಗೋತ್ರಿ ಪಟ್ಟಣ ಸೌಹಾರ್ದ ಸಹಕಾರ ಸಂಘ ನಿಯಮಿತ. ನಿರ್ದೇಶಕರುಗಳಾದ ಅಮರೇಶ ಹುಡಾ. ವೆಂಕಟೇಶನ ನವಲಿ. ವೆಂಕೋಬ. ಅಮರೇಶ ಬಾಗೋಡಿ ಅಧ್ಯಕ್ಷರು ಯುವ ಘಟಕ ಗಂಗಾಮತ ಸಮಾಜ ಸಿಂಧನೂರು. ವೀರೇಶ ಒಂಟಿಗೇರು. ಕರಿಯಣ್ಣ ಕಲ್ಲೂರು. ಹಾಗೂ ಹೊಸಗೇರಪ್ಪ ಗೊರೇಬಾಳ ಅಧ್ಯಕ್ಷರು ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಸಮಿತಿ ಸಿಂಧನೂರು. ಮತ್ತು ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮ–ರಿಯಪ್ಪ ಜ್ಯೋತಿ. ಮತ್ತು ಸಿಂಧನೂರು ತಾಲೂಕ ಗಂಗಾಮತ ಸಮಾಜದ ಅನೇಕ ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

## B.Sc ಕಾರ್ಡಿಯಾಕ್ ಕೇರ್

ಬಿ.ಎಸ್ಸಿ – ಹೃದಯ ಆರೈಕೆ ತಂತ್ರಜ್ಞಾನ B.Sc ಕಾರ್ಡಿಯಾಕ್ ಕೇರ್ ಟೆಕ್ನಾಲಜಿ ಕೋರ್ಸ್ (B.Sc in Cardiac Care Technology) ಎಂಬುದು ಹೃದಯ ಸಂಬಂಧಿತ ರೋಗನಿರ್ಣಾಸ ಮತ್ತು ಚಿಕಿತ್ಸಕ ವಿಧಾನಗಳಲ್ಲಿ ತರಬೇತಿ ನೀಡುವ ಪದವಿಪೂರ್ವ ಕೋರ್ಸ್ ಆಗಿದ್ದು, ಇದರಲ್ಲಿ ವಿದ್ಯಾರ್ಥಿಗಳು ECG, ಎಕೋಕಾರ್ಡಿಯೋಗ್ರಫಿ, ಕಾರ್ಡಿಯಾಕ್ ಕ್ಯಾತಿಟೆರೈಸೇಶನ್, ಮತ್ತು ಪಲ್ಮನರಿ ಫಂಕ್ಷನ್ ಟೆಸ್ಟ್‌ನಂತಹ ಪರೀಕ್ಷೆಗಳನ್ನು ನಿರ್ವಹಿಸಲು ಕಲಿಯುತ್ತಾರೆ ಮತ್ತು ಹೃದ್ರೋಗಶಾಸ್ತ್ರಜ್ಞರಿಗೆ ಸಹಾಯ ಮಾಡುತ್ತಾರೆ. ಈ ಕೋರ್ಸ್ ಹೃದಯದ ಅಂಗರಚನಾಶಾಸ್ತ್ರ, ಶರೀರಶಾಸ್ತ್ರ, ರೋಗನಿರ್ಣಯ ತಂತ್ರಗಳು, ಮತ್ತು ರೋಗಿಗಳ ಆರೈಕೆಯನ್ನು ಒಳಗೊಂಡಿದ್ದು, ಆಸ್ಪತ್ರೆಗಳು, ಕ್ಲಿನಿಕ್‌ಗಳು ಮತ್ತು ಡಯಗ್ನೋಸ್ಟಿಕ್ ಕೇಂದ್ರಗಳಲ್ಲಿ ಹೃದಯ ತಂತ್ರಜ್ಞರಾಗಿ ಕೆಲಸ ಮಾಡಲು ಅವಕಾಶ ನೀಡುತ್ತದೆ. ಕೋರ್ಸ್‌ನ ಪ್ರಮುಖ ವಿಷಯಗಳು ಹೃದಯ ಅಂಗರಚನಾಶಾಸ್ತ್ರ ಮತ್ತು ಶರೀರಶಾಸ್ತ್ರ (Heart Anatomy & Physiology): ಹೃದಯದ ರಚನೆ ಮತ್ತು ಕಾರ್ಯಗಳ ಬಗ್ಗೆ ಅಧ್ಯಯನ. ರೋಗನಿರ್ಣಯ ವಿಧಾನಗಳು, ಟ್ರೆಡ್‌ಮಿಲ್ ಪರೀಕ್ಷೆ, ಎಕೋ – ಡಾಪ್ಲರ್, ಮತ್ತು ಕಾರ್ಡಿಯಾಕ್ ಕ್ಯಾತಿಟೆರೈಸೇಶನ್. ವೈದ್ಯಕೀಯ ಉಪಕರಣಗಳು (Medical Equipment): ಹೃದಯ ಸಂಬಂಧಿ ಉಪಕರಣಗಳ ಬಳಕೆ. ರೋಗಿಗಳ ಆರೈಕೆ (Patient Care): ರೋಗಿಗಳ ಸುರಕ್ಷತೆ ಮತ್ತು ಸೌಕರ್ಯವನ್ನು ಖಚಿತಪಡಿಸುವುದು. ಪಲ್ಮನರಿ ಫಂಕ್ಷನ್ ಟೆಸ್ಟ್ (Pulmonary Function Tests): ಶ್ವಾಸಕೋಶದ ಪರೀಕ್ಷೆಗಳು. ವೃತ್ತಿ ಅವಕಾಶಗಳು (Career Opportunities) ಹೃದಯ ತಂತ್ರಜ್ಞರು (Cardiac Technologists): ಆಸ್ಪತ್ರೆಗಳು ಮತ್ತು ಡಯಗ್ನೋಸ್ಟಿಕ್ ಕೇಂದ್ರಗಳಲ್ಲಿ. ಹೃದಯರಕ್ತನಾಳದ ಕ್ಲಿನಿಕ್‌ಗಳು (Cardiovascular Clinics): ವಿವಿಧ ಚಿಕಿತ್ಸಾಲಯಗಳಲ್ಲಿ. ಉನ್ನತ ಶಿಕ್ಷಣ (Higher Education): ಇಂಟರ್ವೆನ್ಷನಲ್ ಕಾರ್ಡಿಯಾಲಜಿ, ಎಲೆಕ್ಟ್ರೋಫಿಸಿಯಾಲಜಿ ಅಥವಾ ಹೆಲ್ತ್‌ಕೇರ್ ಮ್ಯಾನೇಜ್‌ಮೆಂಟ್‌ನಲ್ಲಿ ಫೆಲೋಶಿಪ್ ಮತ್ತು ಪಿ.ಎಚ್‌.ಡಿ.. ಪ್ರಯೋಜನಗಳು (Benefits) ಉಜ್ವಲ ಭವಿಷ್ಯ: ಆರೋಗ್ಯ ಕ್ಷೇತ್ರದಲ್ಲಿ, ವಿಶೇಷವಾಗಿ ಹೃದಯದ ಆರೈಕೆಯಲ್ಲಿ ಉತ್ತಮ ಭವಿಷ್ಯ. ಪ್ರಾಕ್ಟಿಕಲ್ ಅನುಭವ: ಕೈಗೊಳ್ಳುವ ತರಬೇತಿ ಮತ್ತು ಉಪಕರಣಗಳ ಬಳಕೆಯಿಂದ ಉತ್ತಮ ಪ್ರಾಯೋಗಿಕ ಅನುಭವ. ಉತ್ತಮ ಸಂಬಳ: ಅನುಭವ ಮತ್ತು ಕೌಶಲ್ಯಗಳ ಆಧಾರದ ಮೇಲೆ ಉತ್ತಮ ವೇತನದ ಅವಕಾಶ. ಅರ್ಹತೆ: ಮಾನ್ಯತೆ ಪಡೆದ ಮಂಡಳಿಯಿಂದ ವಿಜ್ಞಾನ ವಿಭಾಗದಲ್ಲಿ (PCB/PCM) 10+2 (PUC II). 10+2 ರಲ್ಲಿ ಕನಿಷ್ಠ 50% ಅಂಕಗಳು

# ಸಹಕಾರ ಭಾರತಿ ಸಮಾಲೋಚನೆ ಹಾಗೂ ನೋಂದಣಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶ್ರೀ ವಿರೂಪಾಕ್ಷೇಶ್ವರ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ರಾಯಚೂರು ಜಿಲ್ಲಾ ಸಹಕಾರ ಭಾರತಿ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ನಡೆದ ಸಮಾಲೋಚನೆ ಹಾಗೂ ನೋಂದಣಿ ಕಾರ್ಯಕ್ರಮ ಸಹಕಾರ ಭಾರತಿ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಅಮರೇಗೌಡ ನಕ್ಕುಂದಿ ರವರು ಸಹಕಾರ ಭಾರತೀಯ ಸಂಸ್ಥಾಪಕ ಅಧ್ಯಕ್ಷರಾದ ಲಕ್ಷ್ಮಣರಾವ್ ಇನಾಂದರ್ ರವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ರಾಜ್ಯದಲ್ಲಿ ಸಹಾಕರಿ ಸಂಸ್ಥೆಗಳ ಬೆಳವಣಿಗೆಯಲ್ಲಿ ಅಂಗ ಸಂಸ್ಥೆಯಾಗಿ ಸಹಕಾರ ಭಾರತಿ ಕಾರ್ಯನಿರ್ವಹಿಸುತ್ತಿದೆ.**



ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ನೋಂದಾಯಿಸಿಕೊಂಡು ತಾಲೂಕಿನ ಸಹಕಾರ ಭಾರತಿ ಸಂಸ್ಥೆಯ ಪದಾಧಿಕಾರಿಗಳನ್ನು ಆಯ್ಕೆಮಾಡಲಾಗುವುದು ಎಂದು ತಿಳಿಸಿದರು. ಮಾನವಿ ಪಟ್ಟಣ ಸಹಕಾರಿ ಸೌಹಾರ್ದ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳಾದ ನಾಗರಾಜ್ ಮಾತನಾಡಿ 1978 ರಲ್ಲಿ ಸಹಕಾರ ಭಾರತಿ ಸ್ಥಾಪನೆಯಾಗಿದ್ದು ಸಹಕಾರ ಭಾರತಿ ಸಹಕಾರಿ ಸಂಸ್ಥೆಗಳ ಸಹಕಾರಿಗಳ ಜವಾಬ್ದಾರಿಗಳನ್ನು ಹಿತಾಸಕ್ತಿಯನ್ನು ಕಾಪಾಡುವಲ್ಲಿ ಶ್ರಮಿಸುತ್ತಿದೆ. ಸಂಸ್ಕಾರ ಮತ್ತು ಸಹಕಾರ ಇಲ್ಲದೆ ಉದ್ಧಾರ ಸಾಧ್ಯವಿಲ್ಲ ಎನ್ನುವುದು ಸಹಕಾರ ಭಾರತಿಯ ಮೂಲ ಆಶಾಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್.ಕೆ.ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾದ ಮಲ್ಲನಗೌಡ ನಕ್ಕುಂದಿ, ಕಲಬುರ್ಗಿ ವಿಭಾಗೀಯ ಸಂಘಟನಾ ಕಾರ್ಯದರ್ಶಿ ರಾಜಕುಮಾರ್. ಜಿಲ್ಲಾ ಪ್ರ. ಕಾರ್ಯದರ್ಶಿ ಬಸವರಾಜ. ಬಿ, ಜಿಲ್ಲಾ ಮಹಿಳಾ ಪ್ರಮುಖ್ ರಾದ ನಾಗರತ್ನಮ್ಮ ಪಾಟೀಲ, ತಾಲೂಕಿನ ವಿವಿಧ ಸಹಕಾರಿ ಸಂಸ್ಥೆಯ ಅಧ್ಯಕ್ಷರಾದ ಆರ್. ಬಸವರಾಜ್, ರವಿಕುಮಾರ್ ಪಾಟೀಲ್ ವಕೀಲರು, ಮುತ್ತಣ್ಣ,ಹೆಚ್.ಮೌನೇಶ್ ಗೌಡ , ವಿವಿಧ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಕ ಅಧಿಕಾರಿಗಳಾದ ಶಂಕರಾನಂದ,ಅರ್ಜೇಯ್ ಕುಮಾರ್, ದೇವರಾಜ ಪೊತ್ನಾಳ್ ಸೇರಿದಂತೆ ತಾಲೂಕಿನ ವಿವಿಧ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದರು.

# ಅನಧಿಕೃತ ಸಾ–ಮಿಲ್ ಗಳ ಮೇಲೆ ಅರಣ್ಯ ಅಧಿಕಾರಿಗಳ ದಾಳಿ



❑ ನೈಜ್ಯ ದೆಸೆ ನ್ಯೂಸ್

**21 ಅರಕೇರಾ 1: ದೇವದುರ್ಗ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯ ಅರಕೇರಾ ಪಟ್ಟಣದಲ್ಲಿ ಅನಧಿಕೃತವಾಗಿ ಕಾರ್ಯಾಚರಿಸುತ್ತಿದ್ದ ಮರ ಕತ್ತರಿಸುವ ಕಾರ್ಖಾನೆಗಳ (ಸಾ–ಮಿಲ್) ಮೇಲೆ ಅರಣ್ಯಾಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಸಾ–ಮಿಲ್‌ಗಳಲ್ಲಿದ್ದ ಚಕ್ರ ಹಾಗೂ ವಿದ್ಯುತ್ ಮೋಟಾರ್‌ಗಳನ್ನು ಜಪ್ತಿ ಮಾಡಿ, ಮಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.**

ವಲಯ ಅರಣ್ಯಾಧಿಕಾರಿ ಮುಹಮ್ಮದ್ ಅಲಿ ಉದ್ದೀನ್ ಅವರ ನೇತೃತ್ವದಲ್ಲಿ ಈ ದಾಳಿ ನಡೆದಿದೆ. ಈ ಹಿಂದೆ 2024ರಲ್ಲಿ ಇದೇ ಸಾ–ಮಿಲ್‌ಗಳ ಮೇಲೆ ಅರಣ್ಯ ಇಲಾಖೆಯ ತಂಡ ದಾಳಿ ನಡೆಸಿ, ಅವುಗಳಿಗೆ ಬೀಗ ಹಾಕಿ ಮುಚ್ಚಿಸಿ ಮೊಕದ್ದಮೆ ದಾಖಲಿಸಿತ್ತು. ಆದರೆ, ಮಾಲೀಕರು ಅರಣ್ಯ ಇಲಾಖೆಯ ಸೀಲ್ ಹಾಗೂ ಬೀಗ ಮುರಿದು ಕಾನೂನು ಬಾಹಿರವಾಗಿ ಪುನಃ ಮರ ಕತ್ತರಿಸುವ ಕಾರ್ಯ ಆರಂಭಿಸಿದ್ದರು. ಇಲಾಖೆಯ ಆದೇಶ ಉಲ್ಲಂಘಿಸಿ ಸಾ–ಮಿಲ್ ನಡೆಸುತ್ತಿದ್ದ 7 ಜನರ ವಿರುದ್ಧ ಇದೀಗ ಹೊಸದಾಗಿ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಇನ್ನು ಮುಂದೆ ಇಂತಹ ಅಕ್ರಮ ಚಟುವಟಿಕೆಗಳು ಕಂಡುಬಂದರೆ, ಕೇವಲ ಯಂತ್ರಗಳನ್ನು ಜಪ್ತಿ ಮಾಡುವುದಲ್ಲದೆ,

ಜೆಸಿಬಿ ಸಹಾಯದಿಂದ ಫೌಂಡೇಶನ್ ಸಮೇತ ಸಾ–ಮಿಲ್‌ಗಳನ್ನು ಕಿತ್ತುಹಾಕಿ ನೆಲಸಮಗೊಳಿಸಲಾಗುವುದು ಎಂದು ವಲಯ ಅರಣ್ಯಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಹನುಮೇಶ ಯಾದವ್, ಹನುಮಂತ ಪವಾಡಪ್ಪ ಗಸ್ತು ಅರಣ್ಯ ಪಾಲಕರಾದ ಸಗರಪ್ಪ, ಶರಣಬಸವರಾಜ್, ಬಸವರಾಜ್, ಭರಮಗೌಡ, ಈರೇಶ್, ಸಂಗಮ ಮತ್ತಿತರು ಇದ್ದರು.


# ಶರಪಂಜರದಲ್ಲಿ ಸೆರೆಯಾದ ಜನರ ಜೀವಹಿಂಡಿದ್ದ ವಾನರ

❑ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಳಗಾನೂರು ಪಟ್ಟಣದ ಜನರಿಗೆ ಕೊನೆಗೂ ನಿರಾಳತೆಯ ಉಸಿರು ಬಿಡುವ ಅವಕಾಶ ದೊರೆತಿದೆ. ಕೆಲವು ತಿಂಗಳುಗಳಿಂದ ಪಟ್ಟಣದಲ್ಲಿ ಜನರ ಮೇಲೆ ಹಾರಿ, ನಿಲ್ಲಿಸಿದ್ದ ವಾಹನಗಳನ್ನು ಬೀಳಿಸಿ, ಮನೆಗಳೊಳಗೆ ನುಗ್ಗಿ ಮೊಬೈಲ್ ಸೇರಿದಂತೆ ಮೌಲ್ಯಯುತ ವಸ್ತುಗಳನ್ನು ಹೊತ್ತೊಯ್ಯುತ್ತಿದ್ದ ಜನಪೀಡಕ ಕೋತಿಯನ್ನು ಅರಣ್ಯ ಇಲಾಖೆ ಮತ್ತು ಪಟ್ಟಣ ಪಂಚಾಯ್ತಿ ಸಿಬ್ಬಂದಿ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ.**

ಅರಣ್ಯ ಇಲಾಖೆ ಮತ್ತು ಬಳಗಾನೂರು ಪಟ್ಟಣ ಪಂಚಾಯ್ತಿಯ ಸಿಬ್ಬಂದಿ ಸುಮಾರು ಎರಡು ತಾಸುಗಳ ಸತತ ಪ್ರಯತ್ನದ ನಂತರ ಈ ಕಿಲಾಡಿ





ಕೋತಿಯನ್ನು ಹಿಡಿಯುವಲ್ಲಿ ಯಶಸ್ವಿಯಾದರು. ಈ ಘಟನೆ ಕುರಿತು ನಮ್ಮ ಪತ್ರಿಕೆಯಲ್ಲಿ ಸುದ್ದಿ ಪ್ರಸಾರವಾಗಿತ್ತು. ಅದಕ್ಕೆ ತಕ್ಷಣ ಸ್ಪಂದಿಸಿದ ಪಟ್ಟಣ ಪಂಚಾಯ್ತಿ ಅರಣ್ಯ ಇಲಾಖೆಗೆ ದೂರು ನೀಡಿದ್ದು, ಅದರ ಫಲವಾಗಿ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ. ಜನಪೀಡಕ ಕೋತಿ ಸೆರೆಯಾಗುತ್ತಿದ್ದಂತೆ, ಪಟ್ಟಣದಾದ್ಯಂತ ಭಯಭೀತರಾಗಿದ್ದ ಜನರ ಮನದಲ್ಲಿ ಸಮಾಧಾನ ಮೂಡಿದೆ. ಪಟ್ಟಣ ಪಂಚಾಯ್ತಿ ಹಾಗೂ ಅರಣ್ಯ ಇಲಾಖೆಯ ತ್ವರಿತ ಮತ್ತು ಪರಿಣಾಮಕಾರಿ ಕಾರ್ಯಾಚರಣೆಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿ ಧನ್ಯವಾದಗಳನ್ನು ತಿಳಿಸಿದ್ದಾರೆ. ಇದು ಜನರ ಸುರಕ್ಷತೆಗೆ ಸರ್ಕಾರದ ಇಲಾಖೆಗಳು ಸ್ಪಂದಿಸಿದ ಉತ್ತಮ ಉದಾಹರಣೆಯಾಗಿದೆ. ವರದಿ ಸುರೇಶ ಬಳಗಾನೂರು

## ನಿತಿನ್ ನಬಿನ್ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದಕ್ಕೆ ಸಂಭ್ರಮಾಚರಣೆ.

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಕ್ಷದ ವತಿಯಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಆಯ್ಕೆಯಾದ ಹಿನ್ನೆಲೆಯಲ್ಲಿ ಬಿಜೆಪಿಯಿಂದ ಸಂಭ್ರಮಾಚರಣೆ.**



ಬುಧವಾರ ನಗರದ ಸುಕಲಾಪೇಟೆಯಲ್ಲಿರುವ ಹಿಂದುಳಿದ ವರ್ಗಗಳ ನಾಯಕ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸು ರವರ ಮೂರ್ತಿ ಮಾಲಾರ್ಪಣೆ ಮಾಡಿ ಬಿಜೆಪಿ ಮುಖಂಡರಾದ ಕೆ ಕರಿಯಪ್ಪ ಹಾಗೂ ನಗರ ಮಂಡಲ ಅಧ್ಯಕ್ಷ ಸಿದ್ರಾಮೇಶ ಮನ್ನಾಪುರ ಹಾಗೂ ಗ್ರಾಮೀಣ ಮಂಡಲ ಅಧ್ಯಕ್ಷ ವೆಂಕೋಬ ನಾಯಕ್ ಇವರ ನೇತೃತ್ವದಲ್ಲಿ ಜಮಾವಣೆಗೊಂಡ ಪಕ್ಷದ ಕಾರ್ಯಕರ್ತರು, ನಿತಿನ್ ಅವರಿಗೆ ಅಭಿನಂದನೆ ಹೇಳಿ ಅವರ ಪರ ಘೋಷಣೆಗಳನ್ನು ಕೂಗಿ ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಎಂ ದೊಡ್ಡ ಬಸವರಾಜ, ಪರಮೇಶಪ್ಪ ಆದಿಮನಿ,ಜಿಲ್ಲಾ ಉಪಾಧ್ಯಕ್ಷರಾದ ಲಿಂಗರಾಜ ಹೂಗಾರ,ಮಮತಾ ಹಿರೇಮಠ,ಶಿವಮ್ಮ,ಪಕೀರಪ್ಪ ಬಾಗೋಡಿ, ರವಿ ರಾಠೋಡ, ಶಶಿಧರ್ ಹಿರೇಮಠ,ಸೋಮನಾಥ ಕಲ್ಲೂರು,ಸಿರಾಜ್ ಪಾಷಾ,ನಬಿ ಅನಗವಾಡಿ,ಸಿದ್ದಲಿಂಗಯ್ಯ ಸ್ವಾಮಿ ವಕೀಲರು,ಮಹಿಳಾ ಮುಖಂಡರಾದ ಪ್ರೇಮ ಸಿದ್ಧಾಂತಿ ಮಠ, ಮಹದಾನಂದ, ಸಹನಾ ಹಿರೇಮಠ ಹಾಗೂ ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

# ಸರ್ವಜ್ಞ ವಿದ್ಯಾಪೀಠದಲ್ಲಿ ಚೌಡಯ್ಯನವರ ಜಯಂತಿ ಆಚರಣೆ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶ್ರೇಷ್ಠ ವಚನಕಾರ, ದಾರ್ಶನಿಕರಾಗಿರುವ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತೋತ್ಸವವನ್ನು ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಮಂಗಳೂರ ಅವರು ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ, ಪುಷ್ಪ ನಮನ ಅರ್ಪಿಸಿದರು.**

ನಂತರ ಮಾತನಾಡಿದ ಅವರು ಅಂಬಿಗರ ಚೌಡಯ್ಯನವರು 12ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಹಾಗೂ ಶ್ರೇಷ್ಠ ವಚನಕಾರರಾಗಿದ್ದಾರೆ. ವೃತ್ತಿಯಲ್ಲಿ ಅಂಬಿಗನಾಗಿದ್ದರೂ, ಪ್ರವೃತ್ತಿಯಲ್ಲಿ ಅನುಭವಿಗಳಾಗಿದ್ದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಸಂತೋಷ ಪವಾರ, ಜವಳಗೇರಿ,ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ,ಶಾಂತಗೌಡ ಬಿರಾದಾರ, ಸಂಜು ಕುಮಾರ ರಾಠೋಡ, ಬಸವರಾಜ ಸವದತ್ತಿ, ರವಿಕುಮಾರ , ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕಣಗೇರಿ, ಸಿದ್ದನಗೌಡ ಮುದ್ನೂರ, ಭೀಮನಗೌಡ ಸಾಸನೂರ, ಚೇತನ ನಾವದಗಿ, ಸವಿತಾ ಅಸ್ಕಿ,ಶಿವಲೀಲಾ ಚುಂಚೂರು, ರೂಪಾ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತಾ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶ್ರುತಿ ಚೌದ್ರಿ,ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ,ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಮುಬಾರಕ ಬನ್ನಟ್ಟಿ,ದೇವರಾಜ ದೇಸಾಯಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜೈಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸರ್ವ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ನಮ್ಮ ಕರವೇ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಜೊತೆಗೆ ಸಮಸ್ಯೆಗಳೂ ಹೆಚ್ಚುತ್ತಲೇ ಇವೆ. ಪುರಸಭೆ ಸಾರ್ವಜನಿಕರ ಸಮಸ್ಯೆ ನಿವಾರಣೆಗೆ ಮುಂದಾಗಬೇಕೆಂದು ನಮ್ಮ ಕರವೇ ತಾಲೂಕ ಅಧ್ಯಕ್ಷ ತಿಮ್ಮರೆಡ್ಡಿ ಮುನ್ನೂರು ಪುರಸಭೆಯ ಮುಖ್ಯಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಒತ್ತಾಯಿಸಿದರು.**

ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾಮಗಾರಿಗಳನ್ನು ಪೂರ್ತಿಗೊಳಿಸಿ, ಜನಸಾಮಾನ್ಯರ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಆಡಳಿತ ಅನುವು ಮಾಡಿಕೊಡಬೇಕು. ಬೆಂಗಳೂರು ಬೈ ಪಾಸ್ ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆ ತಾಂಡವವಾಡುತ್ತಿದೆ. ಕೂಡಲೇ ಖಾಸಗಿ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಿ, ಸುಗಮ ಪಾರ್ಕಿಂಗ್ ವ್ಯವಸ್ಥೆ ಮಾಡಿಸಬೇಕು. ಪಟ್ಟಣದ ಹಳೇ ಬಸ್ಟಾಂಡ್‌ನಲ್ಲಿ ಒತ್ತುವರಿ ಮಾಡಿದ ಸರಕಾರಿ ಜಮೀನನ್ನು ತೆರವು ಗೊಳಿಸಬೇಕು. ಫುಟ್ ಪಾತ್ ಹೋಟೆಲ್‌ಗಳ ಮುಸುರಿ ನೀರನ್ನು ಬಸ್ಟ್ಯಾಂಡ್ ಬಳಿಯ ಡಿವೈಡರ್‌ಗಳ ಮೇಲೆ ಚೆಲ್ಲುತ್ತಿರುವ ಪರಿಣಾಮ ದನಗಳು, ನಾಯಿಗಳು ಅದನ್ನು ತಿನ್ನಲು ಬರುತ್ತವೆ.



ಇದರಿಂದ ವಾಹನ ಸವಾರರು ನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ. ಕೂಡಲೇ ಫುಟ್‌ಪಾತ್ ವ್ಯಾಪಾರಿಗಳಿಗೆ ಮುಸುರಿ ನೀರು ಚೆಲ್ಲದಂತೆ ತಾಕೀತು ಮಾಡಬೇಕು. ತರಕಾರಿ ಮಾರ್ಕೆಟ್ ಕಾಮಗಾರಿ ಅರ್ಧದಲ್ಲೇ ನಿಂತಿದ್ದು, ಕೂಡಲೇ ಕಾಮಗಾರಿ ಆರಂಭಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಬೇಕು. ಬೀದಿ ನಾಯಿಗಳು, ಬಿಡಾಡಿ ದನಗಳು ರಸ್ತೆಗೆ ಬಂದು ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದ್ದು, ತ್ವರಿತವಾಗಿ ಕ್ರಮಕ್ಕೆ ಮುಂದಾಗಬೇಕು. ಹಳೆಬಸ್‌ಸ್ಟ್ಯಾಂಡ್ ಒತ್ತುವರಿ ಕೆಲವರು ಮಾಡಿಕೊಂಡು ಬಾಡಿಗೆಯನ್ನು ತಿನ್ನುತ್ತಿದ್ದಾರೆ. ಹಾಗಾಗಿ ಕೂಡಲೇ ಅಲ್ಲಿದ್ದವರನ್ನು ತೆರವುಗೊಳಿಸಿ, ಪುರಸಭೆಯವರು ಮಳಿಗೆ ಕಟ್ಟುವಂತಹ ಕೆಲಸವಾಗಬೇಕು. ಜಿಟಿಟಿಸಿ ಕಾಲೇಜು ಪಕ್ಕದ ಹಳ್ಳದಲ್ಲಿ ಚಿಕನ್ ಅಂಗಡಿಗಳ ತ್ಯಾಜ್ಯ, ಸತ್ತ ಪ್ರಾಣಿಗಳನ್ನು ಎಸೆಯುತ್ತಾರೆ. ಇದರಿಂದ ಸುತ್ತಮುತ್ತಲ ಜನರು ಅನಾರೋಗ್ಯದ ವಾತಾವರಣದಲ್ಲಿ ಜೀವಿಸುವಂತಾಗಿದೆ.

ಹಳೇ ಬಸ್ಟಾಂಡ್, ಸಂತೆ ಬಜಾರ್ ಏರಿಯಾದಲ್ಲಿರುವ ಚಿಕನ್ ಅಂಗಡಿಗಳ ಮಾಲೀಕರಿಗೆ ಹಳ್ಳದಲ್ಲಿ ತ್ಯಾಜ್ಯ ಎಸೆಯದಂತೆ ತಾಕೀತು ಮಾಡಬೇಕು. ಪುರಸಭೆ ವ್ಯಾಪ್ತಿಯಲ್ಲಿ ಖಾಲಿ ಇರುವ ನಿವೇಶನಗಳಲ್ಲಿ ಜಾಲಿ ಮುಳ್ಳು ಬೆಳೆದು 7, 9, 14, 15, 17 ವಾರ್ಡುಗಳು ಸೇರಿ ವಿವಿಧ ಬಡಾವಣೆಗಳಲ್ಲಿ ಹುಳುಹುಪ್ಪಡಿಗಳ ಕಾಟ ಹೆಚ್ಚಾಗಿದೆ. ಖಾಸಗಿ ನಿವೇಶನಗಳ ಮಾಲೀಕರಿಗೆ ದಂಡ ಹಾಕಿ, ಪ್ಲಾಟ್‌ಗಳನ್ನು ಸ್ವಚ್ಛ ಮಾಡಿಸಬೇಕು. ಪಟ್ಟಣದ ಎಸ್.ಎಲ್.ವಿ. ಹೋಟೆಲ್ ಪಕ್ಕದ ಹಳ್ಳದಲ್ಲಿ ತ್ಯಾಜ್ಯ ತುಂಬಿ ವಾತಾವರಣ ಕಲುಷಿತವಾಗಿದೆ. ಕೂಡಲೇ ತ್ಯಾಜ್ಯ ತೆಗೆಸಿ, ಹಳ್ಳವನ್ನು ಸ್ವಚ್ಛಗೊಳಿಸಬೇಕು. ಗಡಿಯಾರ ಚೌಕದಿಂದ ಸಂತೆಬಜಾರ್ ಹೋಗುವ ರಸ್ತೆ ಕಾಮಗಾರಿ ಸ್ಥಗಿತವಾಗಿ ಸಾರ್ವಜನಿಕರು ಪರದಾಡುವಂತಾಗಿದೆ. ತುರ್ತಾಗಿ ಕಾಮಗಾರಿ ಆರಂಭಿಸಿ ಜನರಿಗೆ, ಹಾಗೂ ವಾಹನಗಳ ಓಡಾಟಕ್ಕೆ ಅನುವು ಮಾಡಿಕೊಡಬೇಕು. ಗಡಿಯಾರ ಚೌಕದಿಂದ ಮಲ್ಲಯ್ಯತಾತಾ ಗದ್ದಿಗೆವರೆಗೆ ಸಿಸಿ ರಸ್ತೆ ಕಾಮಗಾರಿ ಆಗಿದ್ದು, ಗುತ್ತಿಗೆದಾರರು ಅಲ್ಲಲ್ಲಿ ಕಲ್ಲು, ಮಣ್ಣುಗಳನ್ನು ಬಿಟ್ಟಿರುತ್ತಾರೆ. ಕೂಡಲೇ ಕಾಂಟ್ರಾಕ್ಟರಗಳನ್ನು ಕರೆಯಿಸಿ. ಅವುಗಳನ್ನು ತೆರವುಗೊಳಿಸಬೇಕು.

ಸಂತೆಬಜಾರ್ ಹೋಗುವ ರಸ್ತೆ ಕಾಮಗಾರಿ ಸ್ಥಗಿತವಾಗಿ ಸಾರ್ವಜನಿಕರು ಪರದಾಡುವಂತಾಗಿದೆ. ತುರ್ತಾಗಿ ಕಾಮಗಾರಿ ಆರಂಭಿಸಿ ಜನರಿಗೆ, ಹಾಗೂ ವಾಹನಗಳ ಓಡಾಟಕ್ಕೆ ಅನುವು ಮಾಡಿಕೊಡಬೇಕು. 6ನೇ ವಾರ್ಡಿನಲ್ಲಿರುವ ನಾಲಾಕ್ಕೆ ಕುರಿ–ಕೋಳಿಗಳನ್ನು ಕೊಯ್ದು ತ್ಯಾಜ್ಯಗಳನ್ನು ಎಸೆಯುತ್ತಿದ್ದಾರೆ. ಅದನ್ನು ಎಸೆಯದಂತೆ ಕ್ರಮ ಕೈಗೊಳ್ಳಬೇಕು. ಬೇಸಿಗೆ ಕಾಲ ಬರುತ್ತಿರುವ ಪರಿಣಾಮ ಪುರಸಭೆ ವ್ಯಾಪ್ತಿಯ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಪುರಸಭೆ ವ್ಯಾಪ್ತಿಯಲ್ಲಿನ ಉದ್ಯಾನವನಗಳ ಸ್ವಚ್ಛತೆ ಮಾಡಿಸುವ ಮೂಲಕ ಸಾರ್ವಜನಿಕರ ವಿಶ್ರಾಂತಿಗೆ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು ಈ ಸಂದರ್ಭದಲ್ಲಿ ರಮೇಶ್ ಗುತ್ತೇದಾರ , ಭೀಮೇಶ್ ಎಲ್ ನಾಯಕ್, ಅಶೋಕ್ ಗಸ್ತಿ, ಯಲ್ಲಪ್ಪ ಬಂಡಿ, ಹಿಟ್ಲರ್ ಮೇಕ್ಯನಿಕ್, ರವಿಕುಮಾರ್, ಶ್ರೀರಾಮ್ ಗುಂಟಿ, ಉದಯ ಕುಮಾರ್, ವಿಜಯ ಕುಮಾರ್ ಪೋಳ್, ಈರಪ್ಪ ಯಲಗಲಾದಿನ್ನಿ, ಹನುಮಂತ ಯಲಗಲಾದಿನ್ನಿ , ಈರಣ್ಣ ರೆಡ್ಡಿ, ಶರಣಮ್ಮ ಹೊನ್ನೂರು, ಲಕ್ಷ್ಮಿ ಅಂಕನಾಳ್ ಸೇರಿದಂತೆ ಇತರರು ಇದ್ದರು.